**ವಿಷಯ ಸಂಖ್ಯೆ: 170.01 (ಅ)**

**ವಿಷಯ** : ದಿನಾಂಕ: 06.12.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ **58 ನೇ ವಿಶೇಷ ಸಭೆಯ** ನಡವಳಿಯನ್ನು ಸ್ಥಿರೀಕರಿಸುವ ಬಗೆಗೆ.

* * * *

**ದಿನಾಂಕ: 06.12.2022** ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 58 ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿಯ ಮುಂದೆ ವಿಷಯ ಮಂಡಿಸಿದೆ.

**ಕುಲಸಚಿವ**

ವಿಷಯ ಸಂಖ್ಯೆ: 170.2

ವಿಷಯ: Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ನೀಡಿರುವ ಬಗ್ಗೆ.

*****

ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾದ Admission to Examination End to End ERP Software ಅನ್ನು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಂದ ಒಟ್ಟು ಮೊತ್ತ ರೂ.98,71,859/-(ತೊಂಬತ್ತೆಂಟು ಲಕ್ಷದ ಎಪ್ಪತ್ತೊಂದು ಸಾವಿರದ ಎಂಟುನೂರ ಐವತ್ತೊಂಭತ್ತು ಮಾತ್ರ, ಎಲ್ಲಾ ತೆರಿಗೆ ಸೇರಿದಂತೆ) ಗಳ ದರದಲ್ಲಿ ದಿನಾಂಕ: 30.09.2019 ರಂದು ಕಾರ್ಯಾದೇಶ ನೀಡಿ ಅಭಿವೃದ್ಧಿಪಡಿಸಿ ಅಳವಡಿಸಿಕೊಂಡು, ಸದರಿ ತಂತ್ರಾಂಶದ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸಲು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ರೂ.95,22,080.80/- (ತೊಂಬತ್ತೈದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಬತ್ತು ರೂಪಾಯಿಗಳು ಎಂಬತ್ತು ಪೈಸೆ ಮಾತ್ರ, ಎಲ್ಲಾ ತೆರಿಗೆ ಸೇರಿದಂತೆ) ಗಳಿಗೆ ದಿನಾಂಕ: 29.09.2021 ರಂದು ಕಾರ್ಯಾದೇಶ ನೀಡಿ ಕರಾರು ಮಾಡಿಕೊಳ್ಳಲಾಗಿರುತ್ತದೆ ಹಾಗೂ ಸದರಿ ಕರಾರಿನ ಅವಧಿಯು ದಿನಾಂಕ: 28.09.2022 ರಂದು ಮುಕ್ತಾಯಗೊಂಡಿರುತ್ತದೆ.

ವಿವಿಯ ಪ್ರವೇಶಾತಿ ವಿಭಾಗದಿಂದ ದಿನಾಂಕ: 12.09.2022 ರಂದು ಮೆ. ಕಿಯೋನಿಕ್ಸ್, ಬೆಂಗಳೂರು ರವರ Admission to Examination End-to-End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯ ಕಾರ್ಯವು ದಿನಾಂಕ: 28.09.2022 ರಂದು ಕೊನೆಗೊಳ್ಳುತ್ತಿರುವ ಕುರಿತು ವಿವಿಯ ಸಮಿತಿ ಸಭೆಯನ್ನು ನಡೆಸಿ ಸದರಿ ಸಮಿತಿಯ ಶೀಫಾರಸ್ಸುಗಳನ್ನಾಧರಿಸಿ, ದಿನಾಂಕ 18.10.2022ರಂದು ನಿರ್ದೇಶಕರು, (ಪ್ರವೇಶಾತಿ) ರವರ ಟಿಪ್ಪಣಿಯಲ್ಲಿ, Admission to Examination End-to-End ERP S/w ಸಂಬಂಧ ಮಾನ್ಯ ಕುಲಪತಿಗಳು (ಪ್ರಭಾರ) ರವರು ವಿವಿಯ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಹಳೆಯ ದರಗಳಲ್ಲಿ ಆರು ತಿಂಗಳ ಅವಧಿಗೆ ಒಪ್ಪಂದವನ್ನು ವಿಸ್ತರಿಸಲು ಮಾನ್ಯ ಕುಲಪತಿಗಳು ಆದೇಶಿಸಿರುವ ಬಗ್ಗೆ ತಿಳಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಐ.ಟಿ ವಿಭಾಗದಿಂದ ಕ್ರಮವಹಿಸಿದಾಗ, ಮಾನ್ಯ ಕುಲಪತಿಗಳು UUCMS ಅನ್ನು January 2023 ರಿಂದ implement ಮಾಡಲು ಆದೇಶಿಸಿ, ಉಳಿದಂತೆ ಎರಡನೆ ಹಾಗೂ ಮೂರನೇ ವರ್ಷದ ಪ್ರವೇಶಾತಿ ಪ್ರಕ್ರಿಯೆ, B.Ed CET, ಪರೀಕ್ಷಾ ಪ್ರಕ್ರಿಯೆಗಳ ಸಂಬಂಧ ವಿವಿಯ ಸಮಿತಿಯ ಶಿಫಾರಸ್ಸುಗಳಂತೆ ಆರು ತಿಂಗಳ ಅವಧಿಗೆ ಒಪ್ಪಂದ ನವೀಕರಿಸಬಹುದಾಗಿದೆ ಹಾಗೂ ದರಗಳನ್ನು ಮೇಲ್ಕಂಡ ಚಟುವಟಿಕೆಗಳಿಗೆ ಸೀಮಿತಗೊಳಿಸಲು ಹಾಗೂ ಪರಿಷ್ಕರಿಸಲು ಸೂಚಿಸಿದ ಹಿನ್ನೆಲೆಯಲ್ಲಿ ದಿನಾಂಕ: 04.11.2022 ರಂದು ವಿವಿವತಿಯಿಂದ M/s. KEONICS, Bengaluru ರವರಿಗೆ ಪ್ರಸ್ತಾವನೆ ಕೋರಿ ಪತ್ರ ಸಲ್ಲಿಸಲಾಗಿರುತ್ತದೆ. ಈ ಸಂಬಂಧ M/s. KEONICS, Bengaluru ರವರು Admission to Examination End-to-End ERP ತಂತ್ರಾಂಶದ ನಿರ್ವಹಣೆಯನ್ನು ಆರು ತಿಂಗಳು ನೀಡುವ ಬಗ್ಗೆ ರೂ. 43,64,525/- (ನಲವತ್ತ ಮೂರು ಲಕ್ಷದ ಅರವತ್ತನಾಲ್ಕು ಸಾವಿರದ ಐನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆ ಸೇರಿ) ಗಳ ದರದ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈ ಸಂಬಂಧ ದಿನಾಂಕ 30.12.2022 ರಂದು ವಿವಿಯ ಸಮಿತಿಯ ಸಭೆ ನಡೆದಿದ್ದು (ನಡಾವಳಿ ಲಗತ್ತಿಸಿದೆ (ಅನುಬಂಧ-1)), ಸದರಿ ಸಮಿತಿಯ ಶಿಫಾರಸ್ಸು ಈ ಕೆಳಕಂಡಂತಿರುತ್ತದೆ:

1. **ವಿವಿಯಲ್ಲಿ UUCMS ಅನ್ನು January 2023 ರಿಂದ implement ಮಾಡುವ ಬಗ್ಗೆ ಸಭೆಯ ಶಿಫಾರಸ್ಸು:**

ಜನವರಿ ಆವೃತ್ತಿಯ ಪ್ರವೇಶಾತಿಯು ಅತಿ ಅಲ್ಪಾವಧಿಯಾಗಿದ್ದು (ಕೊನೆಯ ದಿನಾಂಕ: 31.03.2023), UUCMS ತಂತ್ರಾಂಶವನ್ನು ವಿದ್ಯಾರ್ಥಿಗಳ ಲಾಗಿನ್ ಐಡಿ ಮೂಲಕ test ಆಗಿಲ್ಲದಿರುವ ಕಾರಣ ಹಾಗೂ UUCMS ತಂತ್ರಾಂಶವು ನಮ್ಮ ವಿವಿಯ ಅವಶ್ಯಕತೆಗೆ ಸಂಪೂರ್ಣವಾಗಿ Customize ಆಗಿಲ್ಲದಿರುವ ಕಾರಣ ಮುಂದಿನ ಜುಲೈ-2023 ಆವೃತ್ತಿಯ ಪ್ರವೇಶಾತಿಯನ್ನು UUCMS ತಂತ್ರಾಂಶದ ಮೂಲಕ Pilot Project ಆಗಿಯಾದರೂ ಕೆಲವು ಕಾರ್ಯಕ್ರಮಗಳಿಗೆ ಅಳವಡಿಸಿಕೊಂಡು ಪ್ರವೇಶಾತಿ ಕಲ್ಪಿಸಲು ಕ್ರಮವಹಿಸಲು ಶಿಫಾರಸ್ಸು ಮಾಡಲಾಯಿತು.

2. **ವಿವಿಯ ಸಮಿತಿಯ ಶಿಫಾರಸ್ಸುಗಳಂತೆ ಹಾಗೂ ಮಾನ್ಯ ಕುಲಪತಿಗಳ ಆದೇಶದಂತೆ, ಎರಡನೇ ಹಾಗೂ ಮೂರನೇ ವರ್ಷದ ಪ್ರವೇಶಾತಿ ಪ್ರಕ್ರಿಯೆ, B.Ed CET, ಪರೀಕ್ಷಾ ಪ್ರಕ್ರಿಯೆಗಳ ಸಂಬಂಧ Admission to Examination End to End ERP ತಂತ್ರಾಂಶದ ನಿರ್ವಹಣೆ ಕಾರ್ಯಕ್ಕೆ ವಿವಿಯು ಕೋರಿರುವ ದರದ ಪ್ರಸ್ತಾವನೆಗೆ ಮೆ.ಕಿಯೋನಿಕ್ಸ್ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ಸಭೆಯ ಶಿಫಾರಸ್ಸು:**

ಜನವರಿ 2022-23 ಆವೃತ್ತಿಯ ನೂತನ (Fresh) ಪ್ರವೇಶಾತಿಯನ್ನೊಳಗೊಂಡಂತೆ ಹಾಗೂ ಹಿಂದಿನ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ನವೀಕರಣ, ಬಿ.ಎಡ್ ಸಿ.ಇ.ಟಿ, ಇನ್ನುಳಿದಂತೆ ಎಲ್ಲಾ ಪರೀಕ್ಷಾ ಪ್ರಕ್ರಿಯೆಗಳನ್ನು Admission to Examination End to End ERP ತಂತ್ರಾಂಶದ ಮೂಲಕವೇ ನಡೆಸಬೇಕಾಗಿರುವ ಕಾರಣ, ಪ್ರಸ್ತುತ ಮೆ. ಕಿಯೋನಿಕ್ಸ್ ಸಂಸ್ಥೆಯವರು ತಂತ್ರಾಂಶದ ನಿರ್ವಹಣೆಗೆ ಸಲ್ಲಿಸಿರುವ ದರದ ಪ್ರಸ್ತಾವನೆಯನ್ನು (ಪ.ಸಂ: ಕೆಎಸ್‌ಇಡಿಸಿ/ಐಡಿಎಸ್/ಪಿಪಿಎಸ್/180/2022-23 ದಿನಾಂಕ 09.11.2022) ಕೈಬಿಟ್ಟು, ಈ ಹಿಂದೆ ದಿನಾಂಕ: 21.10.2021 ರಂದು ಮೆ. ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಗೆ ಮಾಡಿಕೊಂಡಿರುವ ಕರಾರು ಒಪ್ಪಂದವನ್ನು, ದಿನಾಂಕ: 29.09.2022 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಕರಾರನ್ನು ಅಥವಾ ಸದರಿ ಕರಾರು ಒಪ್ಪಂದದ ಅವಧಿ ಪೂರ್ಣಗೊಳ್ಳುವವರೆಗೆ ಅಥವಾ ಅವಧಿ ಪೂರ್ಣಗೊಳ್ಳುವ ಸಮಯದಲ್ಲಿ ನಡೆಯುತ್ತಿರುವ ಪ್ರವೇಶಾತಿ ಹಾಗೂ ಪರೀಕ್ಷಾ ಆವೃತ್ತಿಗಳು ಪೂರ್ಣಗೊಳ್ಳುವವರೆಗೆ ಯಾವುದು ನಂತರ ಘಟಿಸುವುದೋ ಈ ಷರತ್ತಿನಂತೆ, ಹಳೆಯ ದರಗಳಲ್ಲೇ, ಹಿಂದಿನ ಕರಾರು ಪೂರ್ಣಗೊಂಡ ದಿನಾಂಕದಿಂದಲೇ ಮೆ. ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯ ಕರಾರನ್ನು ನವೀಕರಿಸಲು ಶಿಫಾರಸ್ಸು ಮಾಡಲಾಯಿತು.

ಮುಂದುವರೆದು, ದಿನಾಂಕ 30.12.2022 ರಂದು ನಡೆದ ವಿವಿಯ ಸಮಿತಿಯ ಶಿಫಾರಸ್ಸಿನಂತೆ, ಮಾನ್ಯ ಕುಲಪತಿಗಳು ಮೆ. ಕಿಯೋನಿಕ್ಸ್ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಮೆ. ಕಿಯೋನಿಕ್ಸ್ ಸಂಸ್ಥೆಯವರಿಗೆ Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯನ್ನು ದಿನಾಂಕ: 29.09.2022 ರಿಂದ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಅವಧಿ ಪೂರ್ಣಗೊಳ್ಳುವ ಸಮಯದಲ್ಲಿ ನಡೆಯುತ್ತಿರುವ ಪ್ರವೇಶಾತಿ ಹಾಗೂ ಪರೀಕ್ಷಾ ಆವೃತ್ತಿಗಳು ಪೂರ್ಣಗೊಳ್ಳುವವರೆಗೆ ಯಾವುದು ನಂತರ ಘಟಿಸುವುದೋ ಅಲ್ಲಿಯವರೆಗೂ ಹಳೆಯ ದರಗಳಲ್ಲೇ (ರೂ.95,22,080.80/- (ತೊಂಬತ್ತೈದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಬತ್ತು ರೂಪಾಯಿಗಳು ಎಂಬತ್ತು ಪೈಸೆ ಮಾತ್ರ, ಎಲ್ಲಾ ತೆರಿಗೆ ಸೇರಿದಂತೆ)) ನಿರ್ವಹಿಸಲು ದಿನಾಂಕ 13.01.2023 ರಂದು ಕಾರ್ಯಾದೇಶ ನೀಡಿ ಕರಾರು/ಒಡಂಬಡಿಕೆ ಮಾಡಿಕೊಳ್ಳಲು ಸೂಚಿಸಲಾಗಿರುತ್ತದೆ.

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, Admission to Examination End to End ERP ತಂತ್ರಾಂಶದ ವಾರ್ಷಿಕ ನಿರ್ವಹಣೆಯ ಸಂಬಂಧ ಕೈಗೊಂಡಿರುವ ಪ್ರಕ್ರಿಯೆಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

(ಕರಡು ಪ್ರತಿ ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

16/01/2023

ಕುಲಸಚಿವ

**ವಿಷಯ ಸಂಖ್ಯೆ :-** 170.03

ವಿಷಯ:- **ಕರಾಮುವಿಯ ಮಂಡಕಳ್ಳಿ ಬಳಿ ನಿರ್ಮಿಸಿರುವ ಶೈಕ್ಷಣಿಕ ಭವನದ ಕಟ್ಟಡ ಹಾಗೂ 10 ಎಕರೆ ಜಾಗವನ್ನು ಬಾಡಿಗೆಗೆ ನೀಡುವುದರ ಬಗ್ಗೆ.**

ಕರಾಮುವಿ ನಿಲಯಕ್ಕೆ ಸೇರಿರುವ ಮೈಸೂರಿನ ಮಂಡಕಳ್ಳಿಯ ಗ್ರಾಮದ ಬಳಿ ಇರುವ ಹತ್ತು ಎಕರೆಯ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಶೈಕ್ಷಣಿಕ ಭವನ ಕಟ್ಟಡವನ್ನು ಒಳಗೊಂಡಂತೆ ಪೂರ್ಣ ಪ್ರದೇಶವನ್ನು ಕರ್ನಾಟಕ ಸರ್ಕಾರದ IT BT ಇಲಾಖೆಗೆ ಒಳಪಡುವ ಸಂಸ್ಥೆಯಾದ Karnataka Innovation & Technology Society (KITS) ಸಂಸ್ಥೆಯವರು ಮತ್ತು Karnataka Digital Economy Mission (KDEM) ಮೂಲಕ Global Technology Center Plug & Play Facility ಯೋಜನೆಯ ಸ್ಥಾಪಿಸುವ ಉದ್ದೇಶಕ್ಕಾಗಿ ಬಾಡಿಗೆ ಆಧಾರದ ಮೇಲೆ ನೀಡುವಂತೆ ವಿವಿನಿಲಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧೀನ ಕಾರ್ಯದರ್ಶಿಗಳ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧ ಸದರಿ ವಿಷಯವನ್ನು 169ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಈ ಸಂಬಂಧ ಸದರಿ ವಿಷಯವನ್ನು **ದಿನಾಂಕ: 26.08.2022 ರಂದು ಜರುಗಿದ 169ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ಘನ ವ್ಯವಸ್ಥಾಪನ ಮಂಡಳಿ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿವಿನಿಲಯದ ಪರವಾಗಿ ನುರಿತ ಪರಿಣಿತರ ಅಭಿಪ್ರಾಯ ಪಡೆದು, ಅಗತ್ಯ ಷರತ್ತುಗಳನ್ನು ಒಳಗೊಂಡಂತೆ ಕರಾರು ಒಪ್ಪಂದ ಮಾಡಿಕೊಂಡು ಮತ್ತು ಇದರ ಆಧಾರದ ಮೇಲೆ ಸದರಿ ಕಟ್ಟಡ ಹಾಗೂ ಪ್ರದೇಶವನ್ನು ಕೋರಿರುವ ಇಲಾಖೆಯವರಿಗೆ ಬಾಡಿಗೆಗೆ ನೀಡಲು ಸದರಿ ವಿಷಯವನ್ನು Tripartite ಕರಾರಿನೊಂದಿಗೆ ಮುಂದಿನ ವ್ಯವಸ್ಥಾಪನ ಮಂಡಳಿಯ ಸಭೆಗೆ ಮಂಡಿಸುವಂತೆ ತಿಳಿಸಲಾಗಿರುತ್ತದೆ.**

ಈ ಸಂಬಂಧ ಕರ್ನಾಟಕ ಸರ್ಕಾರದ IT BT ಇಲಾಖೆಯ ಅಧೀನ ಕಾರ್ಯದರ್ಶಿಗಳು ಸದರಿ ಕಟ್ಟಡ ಹಾಗೂ ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕೆಲಸವನ್ನು ಅತ್ಯಂತ ತುರ್ತಾಗಿ ನಿರ್ವಹಿಸಬೇಕಾಗಿರುವ ಹಿನ್ನಲೆಯಲ್ಲಿ ಕರಾರನ್ನು/ಒಡಂಬಡಿಕೆಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ. ಅಂತೆಯೇ ಸದರಿ ವಿಷಯವನ್ನು ಈಗಾಗಲೇ ಚರ್ಚಿಸಲಾಗಿದ್ದು KSOU, KITS ಹಾಗೂ KDEM ಮೂರು ಸಂಸ್ಥೆಯನ್ನು ಒಳಗೊಂಡಂತೆ ತ್ರಿಪಕ್ಷೀಯ (Tripartite) ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಮಾನ್ಯಕುಲಪತಿಗಳು ದಿನಾಂಕ:19.09.2022 ರಂದು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಸಮರ್ಥನೆಯನ್ನು ಕಾಯ್ದಿರಿಸಿ ಅನುಮೋದನೆಯನ್ನು ನೀಡಿರುವ ಹಿನ್ನೆಲೆಯಲ್ಲಿ Tripartite ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ.

ಮುಂದುವರೆದು Tripartite ಕರಾರಿನ ಅನುಸಾರ KDEM ಹಾಗೂ KSOU ರವರು ಕರಾರಿನಲ್ಲಿ ಸದರಿ ಕಟ್ಟಡ ಒಳಗೊಂಡಂತೆ 10 ಎಕರೆ ಸ್ಥಳವನ್ನು 30 ವರ್ಷಗಳ ಅವಧಿಗೆ ಮತ್ತು ಪ್ರತಿ ವರ್ಷಕ್ಕೆ ರೂ. 14,50,000/-ಗಳ ಬಾಡಿಗೆಗೆ ಹಾಗೂ ಈ ಬಾಡಿಗೆಯನ್ನು ಪ್ರತಿ 05 ವರ್ಷಕ್ಕೊಮ್ಮೆ ಪುನರ್ ನಿಗದಿಪಡಿಸಿಕೊಳ್ಳುವಂತೆ ಮತ್ತು ಇತರೆ ಷರತ್ತುಗಳನ್ನು ಒಳಪಟ್ಟಂತೆ ಬಾಡಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಅಂತೆಯೇ ಸದರಿ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಬಾಡಿಗೆ ನೀಡಿರುವುದರ ಬಗ್ಗೆ ಅನುಸಮರ್ಥನೆಗಾಗಿ ಮಂಡಿಸಲಾಗಿತ್ತು.

ಸದರಿ ವಿಷಯದ ಬಗ್ಗೆ **ದಿನಾಂಕ: 06.12.2022ರಂದು ಜರುಗಿದ 58ನೇ ವಿಶೇಷ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ ಸಭೆಯ ಸದಸ್ಯರು ಮಾನ್ಯ ಉನ್ನತ ಶಿಕ್ಷಣ ಸಚಿವರ ಸಲಹೆಯಂತೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸದರಿ ವಿಷಯದ ಬಗ್ಗೆ ಸರ್ವಾನುಮತದ ಒಪ್ಪಿಗೆ ಪಡೆದು ತೀರ್ಮಾನ ತೆಗೆದುಕೊಳ್ಳುವಂತೆ ಸಭೆಯಲ್ಲಿ ನಿರ್ಧರಿಸಲಾಗಿರುತ್ತದೆ.** ಆದುದರಿಂದ ಸದರಿ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಮಂಡಕಳ್ಳಿ ಬಳಿ ನಿರ್ಮಿಸಿರಿರುವ ಶೈಕ್ಷಣಿಕ ಕಟ್ಟಡ ಹಾಗೂ ಇದಕ್ಕೆ ಒಳಪಟ್ಟಿರುವ 10 ಎಕರೆ ಜಾಗವನ್ನು KDEM ರವರಿಗೆ 30 ವರ್ಷ ಅವಧಿಗೆ ಬಾಡಿಗೆ ನೀಡಿರುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಕುಲಸಚಿವ**

16/01/2023

(ಕರಡು ಪ್ರತಿಯು ಮಾನ್ಯ ಕುಲಪತಿರವರಿಂದ ಅನುಮೋದಿಸಲ್ಪಟ್ಟಿದೆ)

ವಿಷಯ ಸಂಖ್ಯೆ: 170.04

**ವಿಷಯ:- ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಸಂಭಾವನೆ ನಿಗದಿಗೊಳಿಸುವ ಬಗ್ಗೆ.**

ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಯೋಜನಾಧಿಕಾರಿಗಳು ಮನವಿ ಸಲ್ಲಿಸಿ ಈಗಾಗಲೇ ನೀಡುತ್ತಿರುವ ಸಂಭಾವನೆ ತುಂಬಾ ಕಡಿಮೆಯಾಗಿದ್ದು, ಪ್ರವೇಶಾತಿ ಪಡೆದ ಎಲ್ಲಾ ಪ್ರಥಮ, ದ್ವಿತೀಯ, ಹಾಗೂ ತೃತೀಯ ವರ್ಷದ ಕಲಿಕಾರ್ಥಿ ಪ್ರವೇಶಾತಿಗಳು, ಕಲಿಕಾರ್ಥಿ ಸಹಾಯ ಕೇಂದ್ರದ ಲಾಗಿನ್ ಐಡಿಯಲ್ಲಿಯೇ ಬರುವಂತೆ ಮಾಡಿಕೊಂಡು ಈ ಮೂರು ವರ್ಷದ ಪ್ರತಿಯೊಂದು ಪ್ರವೇಶಾತಿಗೂ ಸಹ ಪ್ರವೇಶಾತಿ ಶುಲ್ಕದ ಶೇ.20%ರಷ್ಟನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪಾವತಿಸಲು ನಿಗದಿಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲು ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಲಾಗಿದೆ.

**ಕರಡು ಮಾನ್ಯ ಕುಲಪತಿಗಳಿಂದ ಅನುಮೋದನೆಗೊಂಡಿರುತ್ತದೆ.**

16/01/2023

**ಕುಲಸಚಿವ**

ವಿಷಯ ಸಂಖ್ಯೆ: 170.05

ಶ್ರೀ. ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯರು, ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು, ರವರು ಕರಾಮುವಿಯ ವಿವಿಧ ಮಾಹೆಗಳ ಆದಾಯ ಮತ್ತು ಖರ್ಚು ವೆಚ್ಚಗಳ ಪಟ್ಟಿಯನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸುವಂತೆ ದಿನಾಂಕ 16.11.2022ರ ಪತ್ರದಲ್ಲಿ ಕೋರಿದ್ದು, ಸದರಿಯವರು ಕೋರಿರುವ ವಿವರಗಳನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿದೆ.

ಕರಡು ಪ್ರತಿ ಮಾನ್ಯ ಕುಲಪತಿಯವರಿಂದ ಅನುಮೋದಿಸಲ್ಪಟ್ಟಿದೆ.

ಹಣಕಾಸು ಅಧಿಕಾರಿ

**ವಿಷಯ ಸಂಖ್ಯೆ :** 170.06

ವಿಷಯ :- **2022–23ನೇ ಸಾಲಿನ CBCS ಅಧ್ಯಯನ ಸಾಮಗ್ರಿಗಳ ಹಾಗೂ ಕೊರತೆಯಾಗಿರುವ ಹಳೆಯ ಪಠ್ಯಕ್ರಮದ ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲು ವ್ಯವಸ್ಥಾಪನ ಮಂಡಳಿ ಸಭೆಯ ಅನುಮೋದನೆ ಪಡೆಯುವ ಬಗೆಗೆ.**

*****

ವಿಶ್ವವಿದ್ಯಾನಿಲಯವು 2021-22ರ ಶೈಕ್ಷಣಿಕ ಸಾಲಿನಿಂದ (ಜುಲೈ / ಜನವರಿ ಆವೃತ್ತಿಯಿಂದ) **ಸ್ನಾತಕೋತ್ತರ ಪದವಿ ವಿಷಯಗಳಾದ ಎಂ.ಎ. / ಎಂ.ಕಾಂ., ಎಂ.ಎಸ್ಸಿ., ಎಂ.ಬಿ.ಎ. ಎಂ.ಲಿಬ್.ಐ.ಎಸ್ಸಿ.,** ಮತ್ತು **ಸ್ನಾತಕ ಪದವಿ ವಿಷಯಗಳಾದ ಬಿ.ಎಸ್ಸಿ., ಬಿ.ಸಿ.ಎ. ಬಿ.ಬಿ.ಎಂ.** ಶಿಕ್ಷಣಕ್ರಮಗಳಿಗೆ CBCS ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ 2022–23ನೇ ಶೈಕ್ಷಣಿಕ ಸಾಲಿನ (ಜುಲೈ / ಜನವರಿ ಆವೃತ್ತಿಯಲ್ಲಿ) ಸದರಿ ವಿಷಯಗಳ **ಪ್ರಥಮ ಸೆಮಿಸ್ಟರ್** ಅಧ್ಯಯನ ಸಾಮಗ್ರಿಗಳನ್ನು ಸಿದ್ಧಪಡಿಸಿ ಮುದ್ರಣಕ್ಕಾಗಿ ಡೀನ್ (ಶೈಕ್ಷಣಿಕ) ರವರ ಮುಖಾಂತರ ಅಧ್ಯಯನ ಸಾಮಗ್ರಿ ವಿಭಾಗಕ್ಕೆ ಸಲ್ಲಿಕೆಯಾಗಿರುತ್ತವೆ. ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ, ಸರಬರಾಜು ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿದ್ದು ಹಾಗೂ 2022–23ನೇ ಶೈಕ್ಷಣಿಕ ಸಾಲಿನ (ಜುಲೈ / ಜನವರಿ ಆವೃತ್ತಿಯಲ್ಲಿ) ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ವಿತರಿಸಲು ದಾಸ್ತಾನಿನಲ್ಲಿ ಕೊರತೆಯಾಗಿರುವ ಹಳೆಯ ಪಠ್ಯಕ್ರಮಗಳಾದ **ಬಿ.ಎ. / ಬಿ.ಕಾಂ., ಪಿ.ಜಿ. ಸರ್ಟಿಫಿಕೇಟ್ ಬಿ.ಇಡಿ., ಎಂ.ಬಿ.ಎ.,** ಹಾಗೂ **ಬಿ.ಲಿಬ್.ಐ.ಎಸ್ಸಿ., (ಕ.ಮಾ.)** ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿರುತ್ತದೆ [**ವಿವರಗಳನ್ನು ಅನುಬಂಧಗಳ ರೂಪದಲ್ಲಿ ಸಿದ್ಧಪಡಿಸಿ, ಸಲ್ಲಿಸಿದೆ**].

ಪ್ರಸ್ತುತ, 2022–23ನೇ ಶೈಕ್ಷಣಿಕ ಸಾಲಿನ CBCS ಅಧ್ಯಯನ ಸಾಮಗ್ರಿಗಳ ಹಾಗೂ ಕೊರತೆಯಾಗಿರುವ ಹಳೆಯ ಪಠ್ಯಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಲು, 2020–21ನೇ ಸಾಲಿನ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ಪ್ರಕ್ರಿಯೆಯಲ್ಲಿ ನಿಗದಿಪಡಿಸಲಾಗಿದ್ದ ದರಗಳ ಅನ್ವಯ ಲೆಕ್ಕ ಹಾಕಿ ಅಂದಾಜು **₹ 8,97,41,256=00** ಗಳಿಗೆ ಶೇಕಡ 10 ರಷ್ಟನ್ನು ಹೆಚ್ಚಿಸಿಕೊಂಡು **₹ 9,87,15,382=00** ಗಳಾಗಿದ್ದು, ಒಟ್ಟಾರೆ **₹ 10.00 ಕೋಟಿ** ನಿಗದಿಪಡಿಸಿ ಟೆಂಡರ್ ಆಹ್ವಾನಿಸಬಹುದೆಂದು ಅಂದಾಜಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ **"ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000"** ಹಾಗೂ ಸರ್ಕಾರದ ಸುತ್ತೋಲೆಗಳ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ **"ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್"** ಆಹ್ವಾನಿಸಲು ಈ ಕೆಳಕಂಡ ಅಂಶಗಳಿಗೆ ಚರ್ಚೆ ಮತ್ತು ತೀರ್ಮಾನಕ್ಕಾಗಿ;

- ಅಧ್ಯಯನ ಸಾಮಗ್ರಿಗಳ ಟೆಂಡರ್ ಮುದ್ರಣ ವೆಚ್ಚಕ್ಕಾಗಿ ಅಂದಾಜು ಮೊತ್ತ **₹ 10.00** ಕೋಟಿಗಳ **"ಇ–ಪ್ರೊಕ್ಯೂರ್‌ಮೆಂಟ್"** ಮೂಲಕ ಟೆಂಡರ್ ಆಹ್ವಾನಿಸಲು ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ,
- 2023–24ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸುವ ಸಂಬಂಧ ದಾಖಲಾತಿಗಳನ್ನು ಸಿದ್ಧಪಡಿಸಲು ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು **"ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ"** ರಚಿಸುವ ಬಗ್ಗೆ ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ,

**[ವಿಷಯದ ಕರಡು ಮಾನ್ಯ ಕುಲಪತಿಯವರಿಂದ ಅನುಮೋದಿಸಲ್ಪಟ್ಟಿದೆ]**

16/01/2023

**ಕುಲಸಚಿವ**

ವಿಷಯ ಸಂಖ್ಯೆ: 170.07.

**ವಿಷಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅರ್ಹ ಸಂಸ್ಥೆಗೆ ಭದ್ರತಾ ಸಿಬ್ಬಂದಿ ಸೇವೆ ಟೆಂಡರ್ ನೀಡುವ ಕುರಿತು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ/ಪ್ರಾದೇಶಿಕ ಕೇಂದ್ರಗಳ ಕಟ್ಟಡ ಇತ್ಯಾದಿಗಳ ಸ್ಥಿರ ಮತ್ತು ಚರ ಆಸ್ತಿಗಳ ಸಂರಕ್ಷಣೆ ದೃಷ್ಟಿಯಿಂದ ಕೆಟಿಪಿಪಿ ಕಾಯ್ದೆ/ನಿಯಮಗಳಂತೆ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸಿಬ್ಬಂದಿ ಸೇವೆಯನ್ನು ಎರಡು ವರ್ಷಗಳ ಅವಧಿಗೆ ಪಡೆಯುವ ಸಂಬಂಧ e-procurement portal ಮುಖಾಂತರ **ದಿನಾಂಕ: 22.07.2022ರಂದು** ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಆರು ಬಿಡ್‌ದಾರರು ಭಾಗವಹಿಸಿದ್ದು,

ಬಿಡ್‌ದಾರರ ವಿವರಗಳು:

(1) M/s. Novel Security Services Bangalore
(2) M/s Appu Detective & Security Services, Bangalore
(3) M/s Sharp watch Investigation & Security Services, Mysore
(4) M/s Shree Ranganath Enterprises Mysore
(5) M/s KSF 9 Corporate Services private
(6) M/s Detectwell Security Service Pvt Ltd., Bangalore

**ದಿನಾಂಕ:25.08.2022** ರಂದು ತಾಂತ್ರಿಕ ಬಿಡ್ ತೆರೆದು ಟೆಂಡರ್ ಪ್ರಕಟಣೆಯನ್ವಯ ಬಿಡ್‌ದಾರರು ಸಲ್ಲಿಸಿರುವ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲನೆಗೆ ಹಾಗೂ ಅಂತಿಮಗೊಳಿಸಲು, **ದಿನಾಂಕ: 19.09.2022ರಂದು** ತಾಂತ್ರಿಕ ಬಿಡ್ ಸಭೆಯನ್ನು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯ ಸದ್ಯಸರು ಆರು ಬಿಡ್‌ದಾರರ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದ್ದಾಗ, M/s Detectwell Security Service Pvt Ltd., Bangalore, ಇವರು ಸಲ್ಲಿಸಿರುವ ದಾಖಲೆಗಳ ರೀತ್ಯ ಕ್ರಮ ಸಂಖ್ಯೆ 07ರಲ್ಲಿ ವಿಶ್ವವಿದ್ಯಾನಿಲಯದ ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಲಾಗಿರುವ (Mandatory) ಗೆ ಪೂರಕವಾದ ದಾಖಲೆಗಳನ್ನು ಸಲ್ಲಿಸಿಲ್ಲದ, ಕಾರಣದಿಂದ ಸದರಿ ಬಿಡ್‌ದಾರರನ್ನು ತಾಂತ್ರಿಕ ಬಿಡ್‌ನಿಂದ ಅನರ್ಹಗೊಳಿಸಿ, ಉಳಿದ ಐವರು ಬಿಡ್‌ದಾರನ್ನು ಮುಂದಿನ ಹಂತಕ್ಕೆ ಶಿಫಾರಸ್ಸು ಮಾಡಿತ್ತು. ಶಿಫಾರಸ್ಸುಗೊಂಡ ಸಂಸ್ಥೆಗಳು ಈ ಕೆಳಕಂಡಂತಿವೆ.

(1) M/s. Novel Security Services Bangalore.
(2) M/s Appu Detective & Security Services, Bangalore.
(3) M/s Sharp watch Investigation & Security Services, Mysore.
(4) M/s Shree Ranganath Enterprises Mysore.
(5) M/s KSF 9 Corporate Services private limited Bangalore.

**ದಿನಾಂಕ: 23.09.2022** ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಮೇಲಿನ ಅರ್ಹ ಸಂಸ್ಥೆಗಳ ಆರ್ಥಿಕ ಬಿಡ್ ತೆರೆಯಲಾಗಿ 05 ಸಂಸ್ಥೆಗಳ ಬಿಡ್‌ದಾರರು ಸಹ 3% ಸರ್ವಿಸ ಚಾರ್ಜ್ ನಮೂದಿಸಿದ್ದು, ಒಂದೇ ಮೌಲ್ಯದ ಸೇವಾ ಶುಲ್ಕ ನಮೂದಿಸಿರುವುದರಿಂದ, ಬಿಡ್‌ದಾರರು ಏಕ ರೀತಿಯ ಸೇವಾ ಶುಲ್ಕವನ್ನು ನಮೂದಿಸಿದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಟೆಂಡರ್ ಪ್ರಕಟಣೆಯಲ್ಲಿನ ಮಾರ್ಗಸೂಚಿಗಳನ್ವಯ 05 (ಐದು) ಮಾನದಂಡಗಳನ್ನು

ಅಳವಡಿಸಿಕೊಂಡಿರುವ ಪ್ರಕಾರ 50 (ಐವತ್ತು) ಅಂಕಗಳನ್ನು ನಿಗದಿಪಡಿಸಲಾಗಿತ್ತು, ಈ ಐದು ಸಂಸ್ಥೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವ ಸಂಸ್ಥೆ/ಬಿಡ್‌ದಾರರನ್ನು ಅಂತಿಮಗೊಳಿಸಲು ಕ್ರಮವಹಿಸಬೇಕಿರುತ್ತದೆ.

ಮಾರ್ಗಸೂಚಿಗಳು ಈ ಕೆಳಕಂಡತ್ತಿವೆ.

1. Number of employees registered and engaged in security services **Max marks-10**
2. Certificate for transparent manner payment will be considered as Track record and compliance to labour laws. **Max marks -10**
3. Details of EPF and ESI Registration number of the employees in form (labour law obligation)-E relating to Form-C of Labour Department be uploaded. **Max marks 10**
4. Total number of years of experience asper Form-C in providing security services. **Max marks-10**
5. Total turnover from Security Services only will be considered - **Max marks-10**
   The committee may adopt such other principles relevant for making Recommendations

ಮೇಲ್ಕಂಡ ಮಾನದಂಡಗಳನ್ವಯ ಆರ್ಥಿಕ ಬಿಡ್ ಮೌಲ್ಯಮಾಪನ ಸಮಿತಿಯು ಶಿಪಾರಸ್ಸಿನ (ದಿನಾಂಕ:30.09.2022ರ ಸಭಾ ನಡಾವಳಿಯನ್ನು ಲಗತ್ತಿಸಿದೆ) ಮೇರೆಗೆ ಹೆಚ್ಚಿನ ಅಂಕಗಳನ್ನು ಪಡೆದಿರುವ ಸಂಸ್ಥೆಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ / ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳು ಇತ್ಯಾದಿಗಳಿಗೆ ಎರಡು ವರ್ಷದ ಅವಧಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸುವ ಸಂಬಂಧ ಕರಾರು ಒಪ್ಪಂದ ಮೇರೆಗೆ ಕಾರ್ಯದೇಶ ನೀಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ.

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ)

ಕುಲಸಚಿವ

ವಿಷಯ ಸಂಖ್ಯೆ: 170.08

**ವಿಷಯ:** ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕೆ ಹೆಚ್ಚುವರಿ ಪರಿಕರ ಹಾಗೂ ತಂತ್ರಾಂಶದ additional modules ಖರೀದಿಸುವ ಬಗ್ಗೆ.

*****

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ (Digital Evaluation) ಸಂಬಂಧ ಅವಶ್ಯವಿರುವ Software ಮತ್ತು Hardware ಗಳನ್ನು ಖರೀದಿಸಿ ಅಳವಡಿಸಲು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಹಾಗೂ ಮಾನ್ಯ ಶಾಸನಬದ್ಧ ಸಮಿತಿ ತೀರ್ಮಾನದಂತೆ ಉದ್ದೇಶಿತ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ, ನಿಯಮಾನುಸಾರ L1 ಬಿಡ್ಡುದಾರರಾದ M/s. Convergent Wireless Communications Pvt. Ltd., Bengaluru. ರವರಿಗೆ ರೂ.3,15,82,354/- ಗಳಿಗೆ ದಿನಾಂಕ: 10.03.2022 ರಂದು ಕಾರ್ಯಾದೇಶ ನೀಡಿ ಕರಾರು ಮಾಡಿಕೊಳ್ಳಲಾಗಿ, ಸದರಿ ಸಂಸ್ಥೆಯವರು ವಿಶ್ವವಿದ್ಯಾನಿಲಕ್ಕೆ ಕಾರ್ಯಾದೇಶದಂತೆ Software ಮತ್ತು Hardware ಗಳನ್ನು ಸರಬರಾಜು ಮಾಡಿ ಅಳವಡಿಸಲಾಗಿರುತ್ತದೆ.

ದಿನಾಂಕ: 29.11.2022 ರಂದು ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಪತ್ರದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯದಲ್ಲಿ ಕೆಲವು ತಾಂತ್ರಿಕ ದೋಷಗಳನ್ನು ಸರಿಪಡಿಸಲು ತಿಳಿಸುತ್ತ, ಈ ಕೆಳಕಂಡ ಹೆಚ್ಚುವರಿ ಪರಿಕರ ಹಾಗೂ ತಂತ್ರಂಶವನ್ನು ಒದಗಿಸಿಕೊಡುವಂತೆ ಕೋರಿರುತ್ತಾರೆ.

- Desktop Computers - 25 Nos.
- Scanner - 04 Nos.
- Heavy Duty Cutter – 02 Nos.
- Scanner Accessories (Pick up and Break Rollers) – 150 Nos.
- Digital Valuation Module (Additional Modules as per specification and requirement) - 01 No.

ಮುಂದುವರೆದು, ಮಾನ್ಯ ಕುಲಪತಿಗಳು ಅನುಮೋದನೆಯಂತೆ ಈ ಸಂಬಂಧ ದಿನಾಂಕ: 21.12.2022 ರಂದು ತಾಂತ್ರಿಕ ಪರಿಣಿತರ ಸಮಿತಿ ಸಭೆ ನಡೆದಿದ್ದು ಸದರಿ ಸಮಿತಿಯ ತೀರ್ಮಾನ ಮತ್ತು ಶಿಫಾರಸ್ಸು ಈ ಕೆಳಕಂಡಂತಿರುತ್ತದೆ.

**Regarding Additional Modules and Equipments required for Digital Evaluation:**

**Committee Decisions / Recommendations:**

- Finance Officer asked to study the MoU executed between M/s. Convergent Wireless Communication Pvt., Ltd., and KSOU for customization of additional modules and to consider KTPP Act 4(b) for procurement.
- Committee recommended to purchase desktop computers (25 Nos.) from the tender awarded company directly as the quantity is within 25% as per KTPP act.
- Committee recommended purchasing of four scanners, two cutters, and 150 scanner accessories through GeM (Govt. E-marketing).

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕೆ ಮಾನ್ಯ ಕುಲಸಚಿವರು (ಪರೀಕ್ಷಾಂಗ) ರವರು ಕೋರಿರುವ ಹೆಚ್ಚುವರಿ ಪರಿಕರ ಹಾಗೂ ತಂತ್ರಾಂಶದ additional modules ಖರೀದಿಸಿ ಅಳವಡಿಸಿಕೊಳ್ಳಲು ಸರಿ ಸುಮಾರು ಎಲ್ಲಾ ತೆರಿಗೆ ಸೇರಿದಂತೆ ಒಟ್ಟು ಅಂದಾಜು ಮೊತ್ತ ರೂ. 1,71,17465/-(ಒಂದು ಕೋಟಿ ಎಪ್ಪತ್ತೊಂದು ಲಕ್ಷದ ಹದಿನೇಳು ಸಾವಿರದ ನಾನೂರ ಅರವತ್ತೈದು ರೂಪಾಯಿಗಳು ಮಾತ್ರ) ಗಳಾಗುತ್ತದೆ ಎಂಬ ವಿಷಯವನ್ನು ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕರಡು ಪ್ರತಿ ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

16/01/2023

ಕುಲಸಚಿವ

**ವಿಷಯ ಸಂಖ್ಯೆ:** 170.09

**ವಿಷಯ**: ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ವೃತ್ತಿಪರ ಕೋರ್ಸ್ ಹೊಂದಿರುವ ಪ್ರಯುಕ್ತ ಎರಡು ನಾನ್ ಕಾಂಪೌಂಡೆಡ್ ಅಡ್ವಾನ್ಸ್ ಇಂಕ್ರಿಮೆಂಟ್‌ಗಳನ್ನು ಮಂಜೂರು ಮಾಡಿರುವ ಬಗೆಗೆ.

* * * * *

ಮೇಲಿನ ಉಲ್ಲೇಖಿತ ಪತ್ರಗಳನ್ನು ಅವಗಾಹನೆಗೆ ತರಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಪಿ.ಎಂ. ಚಿನ್ನಯ್ಯ, ಡಾ. ಸಿರಾಜ್ ಬಾಷಾ ಮತ್ತು ಡಾ. ಡಿ. ಎನ್. ಭವ್ಯ /- ಇವರುಗಳು ಮನವಿ ಪತ್ರಗಳನ್ನು ಸಲ್ಲಿಸಿ, ತಾವುಗಳು ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ The Gazette of India, Sep. 18, 2010 (Bhadra 27, 1932)ರ Sec. 9.0 Sub-Section 9.3 ಪ್ರಕಾರ, ಯು.ಜಿ.ಸಿ 2018ರ ನಿಯಮ Sec. 19.0 Sub-Section (iii)ರ ಮತ್ತು Proceedings of the Government of Karnataka, Appendix-IV, Sec 1, Subsection (iii) ಪ್ರಕಾರ ನಾನ್ ಕಾಂಪೌಂಡೆಡ್ ಎರಡು ಅಡ್ವಾನ್ಸ್ ಇಂಕ್ರಿಮೆಂಟ್‌ಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

ಯು.ಜಿ.ಸಿ ಮಾರ್ಗಸೂಚಿ-2010ರ ನಿಯಮ Sec. 19.0 Sub-Section (iii) ರಲ್ಲಿ, Proceedings of the Government of Karnataka, Notification No. F.3-1/2009(PS)dated:23.09.2009 of the UGC, New Delhi, Appendix-IV, Sec-1, Subsection (iii) ರಲ್ಲಿ ಮತ್ತು Gazette of India, Sep-18, 2010 (Bhadra 27, 1932)ರ Sec. 9.0 Sub-Section 9.3 ರಲ್ಲಿ Incentives for Ph.D., / M.Phil. ., and other Higher Qualification ಸಂಬಂಧ ಈ ಕೆಳಗಿನಂತೆ ವಿವರಿಸಲಾಗಿರುತ್ತದೆ:

" Those possessing Post Graduate degree in a Professional course recognized by the relevant Statutory Body/ Council, shall also be entitled to Two Non-compounded Advance Increment at the entry level "

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 483 ಯುಎನ್‌ಇ 2017, ಬೆಂಗಳೂರು, ದಿನಾಂಕ: 16.03.2019ರ ಕ್ರಮ ಸಂಖ್ಯೆ (14)ರಲ್ಲಿ Incentives for Ph.D., / M.Phil ., and other Higher Qualification ಸಂಬಂಧ ಈ ಕೆಳಗಿನಂತೆ ವಿವರಿಸಲಾಗಿರುತ್ತದೆ:

" In view of the conflicting provisons of para-8 of GOI letter No. 1-7/2015-U II(1) dated: 02.11.2017 and in Regulation 19.1 of "UGC Regulations on Minimum Qualifications for appointment of teachers and other academic staff and measures for maintenance of standards in Higher Education, 2018" regarding grant of incentives in the form of advance increments for acquiring Higher Qualifications UGC has been sought clarification in this regard. Appropriate proviso in this clause would be laid down after receiving the same "

ವೃತ್ತಿಪರ ಕೋರ್ಸ್‌ಗೆ ಸಂಬಂಧಿಸಿದಂತೆ ಹೆಚ್ಚುವರಿ ಎರಡು Non-compounded Advance Increment ನೀಡುವಂತೆ ಕೋರಿ ವಿವಿ ನಿಲಯದ ಅಧ್ಯಾಪಕರುಗಳು ಈ ಹಿಂದೆ ಮನವಿ ಪತ್ರಗಳನ್ನು ಸಲ್ಲಿಸಿದ್ದು, ಈ ಸಂಬಂಧ ಕಡತ ಮಂಡಿಸಲಾಗಿತ್ತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಡೀನ್(ಶೈಕ್ಷಣಿಕ) ಹಾಗೂ ಹಣಕಾಸು ಅಧಿಕಾರಿಗಳು, ರಾಜ್ಯ ಸರ್ಕಾರದ ಆದೇಶದಲ್ಲಿ ಈ ಬಗ್ಗೆ ಸ್ಪಷ್ಟ ನಿರ್ದೇಶನವಿಲ್ಲದ ಕಾರಣ ಸರ್ಕಾರ ಹಾಗೂ ಯು.ಜಿ.ಸಿ.ಯಿಂದ ಸ್ಪಷ್ಟ ನಿರ್ದೇಶನ ಪಡೆದು ಮುಂದುವರಿಯುವುದು ಸೂಕ್ತ ಎಂದು ಅಭಿಪ್ರಾಯ ಸೂಚಿಸಿರುತ್ತಾರೆ ಹಾಗೂ ಮಾನ್ಯ ಕುಲಪತಿಗಳು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ ದಿನಾಂಕ: 23.10.2020 ರಂದು ನಡೆದ 162ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಲಾಗಿ, ಸದರಿ ಸಭೆಯಲ್ಲಿ ವೃತ್ತಿಪರ ಕೋರ್ಸ್‌ಗೆ ಎರಡು Non-compounded Advance Increment ನೀಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟನೆ ಪಡೆದು ಕ್ರಮವಹಿಸುವಂತೆ ತೀರ್ಮಾನವಾಗಿರುತ್ತದೆ. ಈ

ಸಂಬಂಧ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮ 2018ರ ಪ್ರಕಾರ ವೃತ್ತಿಪರ ಕೋರ್ಸ್‌ಗೆ ಎರಡು Non-compounded Advance Increment ಅನ್ನು ಬಿಡುಗಡೆಗೊಳಿಸುವ ಕುರಿತು ಸ್ಪಷ್ಟನೆ ನೀಡುವಂತೆ ಕೋರಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು, ಇವರಿಗೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/601/2020-21, ದಿನಾಂಕ: 01.12.2020 ರಂದು ಪತ್ರ ರವಾನಿಸಲಾಗಿರುತ್ತದೆ. ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು, ಇವರು ತಮ್ಮ ಪತ್ರ ಸಂಖ್ಯೆ: ಇಡಿ 56 ಯುಓವಿ 2020, ದಿನಾಂಕ: 05.01.2021ರಲ್ಲಿ;

"ಸರ್ಕಾರ ಆದೇಶ ಸಂ: ಇಡಿ 483 ಯುಎನ್‌ಇ 2017, ದಿನಾಂಕ: 16.03.2019 ರಲ್ಲಿ ಆದೇಶಿಸಿರುವಂತೆ ಯುಜಿಸಿಯ 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸೂಕ್ತ ಪರಿನಿಯಮಾವಳಿಯ ಮೂಲಕ ಅಳವಡಿಸಿಕೊಳ್ಳಲು ಕ್ರಮವಹಿಸಬೇಕಾಗಿದೆ. ಆದರೆ, ವಿಶ್ವವಿದ್ಯಾನಿಲಯವು ಅಂತಹ ಗಂಭೀರ ಪ್ರಯತ್ನ ಮಾಡದೇ ಉಳಿದ ವಿಷಯಗಳ ಬಗ್ಗೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುತ್ತಿದೆ. ಆದ್ದರಿಂದ ಯುಜಿಸಿಯ 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು ಅಳವಡಿಸಿಕೊಂಡ ಪರಿನಿಯಮ / ಆಧ್ಯಾದೇಶವನ್ನು ರಚಿಸಿಕೊಂಡ ನಂತರ ಮೇಲ್ಕಂಡ ವಿಷಯದ ಕುರಿತು ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಲಾಗುವುದು" ಎಂದು ತಿಳಿಸಿರುತ್ತಾರೆ.

ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯ ವೇತನದ ಹಿಂಬಾಕಿ ಮೊತ್ತವನ್ನು ಪಾವತಿಸುವ ಸಂಬಂಧ ರಚಿಸಿಕೊಂಡಿರುವ ಪರಿನಿಯಮದ ಪ್ರತಿಯನ್ನು ಪರಿಷ್ಕರಿಸಿ, ಸದರಿ ಪರಿನಿಯಮಕ್ಕೆ ಅಂಕಿತ ದೊರಕಿಸಿಕೊಡುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು, ಇವರಿಗೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/596/2022-23, ದಿನಾಂಕ: 28.04.2022 ರಂದು ಪತ್ರ ರವಾನಿಸಲಾಗಿರುತ್ತದೆ. ಪ್ರಸ್ತುತದವರೆಗೂ ಸದರಿ ಪರಿನಿಯಮವು ಅಂಕಿತಗೊಂಡು ಬಂದಿರುವುದಿಲ್ಲ.

ಸದರಿಯವರ ಮನವಿಯನ್ನು ಪರಿಗಣಿಸಿ, ಡಾ. ಪಿ.ಎಂ. ಚಿನ್ನಯ್ಯ, ಡಾ. ಸಿರಾಜ್ ಬಾಷಾ ಮತ್ತು ಡಾ. ಡಿ. ಎನ್. ಭವ್ಯ ಇವರುಗಳಿಗೆ ವೃತಿಪರ ಕೋರ್ಸ್ ಹೊಂದಿರುವ ಸಲುವಾಗಿ ನೇಮಕಾತಿ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಎರಡು Non-compounded Advance Increment ಅನ್ನು ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳು(ಪ್ರಭಾರ)ರವರು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಸದರಿಯವರುಗಳಿಂದ 'ಮುಚ್ಚಳಿಕೆ'ಯನ್ನು ಬರೆಸಿಕೊಂಡು, ಎರಡು Non-compounded Advance Increment ಅನ್ನು ಬಿಡುಗಡೆಗೊಳಿಸಲು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/601/2022-23, ದಿನಾಂಕ: 05.11.2022 ಅನ್ನು ಹೊರಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮದ 'ವರದಿ'ಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

(ಕರಡು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

16/01/2023

ಕುಲಸಚಿವ

**ವಿಷಯ ಸಂಖ್ಯೆ:** 170.10

**ವಿಷಯ:** ಪ್ರೊ. ಎಂ. ರಾಮನಾಥಂ ನಾಯ್ಡು, ಪ್ರಾಧ್ಯಾಪಕರು, ತೆಲುಗು ಅಧ್ಯಯನ ವಿಭಾಗ, ಇವರಿಗೆ 6ನೇ ಮತ್ತು 7ನೇ ಪರಿಷ್ಕೃತ ವೇತನ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವ ಸಂಬಂಧ ಅನುಸಮರ್ಥನೆ ಕೋರಿರುವ ಬಗೆಗೆ.

*******

ಪ್ರೊ. ಎಂ. ರಾಮನಾಥಂ ನಾಯ್ಡು, ಪ್ರಾಧ್ಯಾಪಕರು, ತೆಲುಗು ಅಧ್ಯಯನ ವಿಭಾಗ, ಇವರು ಡೀನ್ (ಅಧ್ಯಯನ ಕೇಂದ್ರಗಳು) ವಿಭಾಗದಲ್ಲಿ ಉಪಕುಲಸಚಿವರಾಗಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಿಂದ ಪ್ರಾದೇಶಿಕ ಕೇಂದ್ರಗಳಿಗೆ ಕಂಪ್ಯೂಟರ್ ಮತ್ತಿತರ ಪಿರೋಪಕರಣಗಳ ಖರೀದಿ ಹಗರಣಕ್ಕೆ ಸಂಬಂಧಿಸಿದಂತೆ ದಿನಾಂಕ: 01.03.2018 ರಂದು 'ಷೋಕಾಸ್ ನೋಟಿಸ್' ನೀಡಲಾಗಿದ್ದು, ಇವರ ಸಂಬಂಧ ಜಂಟಿ ಇಲಾಖಾ ವಿಚಾರಣೆ ಚಾಲ್ತಿಯಲ್ಲಿದ್ದು, ವಿಚಾರಣೆ ಇನ್ನೂ ಪೂರ್ಣಗೊಂಡಿರುವುದಿಲ್ಲ ಹಾಗಾಗಿ ಸದರಿಯವರಿಗೆ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವುದಿಲ್ಲ.

ಸದರಿಯವರು 27 ವರ್ಷಗಳಿಂದ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು ಯುಜಿಸಿಯ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸುವಂತೆ ದಿನಾಂಕ: 16.09.2021 ರ ಮನವಿ ಪತ್ರದಲ್ಲಿ ಕೋರಿರುತ್ತಾರೆ.

ಮಾನ್ಯ ಕುಲಪತಿಗಳು(ಪ್ರಭಾರ) ಅವರ ಅನುಮೋದನೆ ಮೇರೆಗೆ ಹಾಗೂ ವ್ಯವಸ್ಥಾಪನಾ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ, ಸರ್ಕಾರದ ನಿರ್ದೇಶನದನ್ವಯ ಪ್ರೊ. ಎಂ. ರಾಮನಾಥಂ ನಾಯ್ಡು, ಇವರಿಗೆ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಆದೇಶ ಸಂಖ್ಯೆ ಕರಾಮುವಿ/ ಆವಿ/ಸಿಬ್ಬಂದಿ-1/82/2022-23, ದಿನಾಂಕ:10.11.2022 ರ ಪ್ರಕಾರ ಆಡಿಟ್ ಆಕ್ಷೇಪಣೆ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಜಂಟಿ ಇಲಾಖಾ ವಿಚಾರಣೆಯ ಅಂತಿಮ ತೀರ್ಪಿನ ಷರತ್ತಿಗೊಳಪಟ್ಟು 'ಮುಚ್ಚಳಿಕೆ'ಯನ್ನು ಬರೆಸಿಕೊಂಡು ಬಿಡುಗಡೆಗೊಳಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಸದರಿಯವರಿಗೆ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವ ಕ್ರಮವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿದೆ.

(ಮಾನ್ಯ ಕುಲಪತಿಯವರಿಂದ ಕರಡು ಅನುಮೋದಿಸಲ್ಪಟ್ಟಿದೆ)

ಕುಲಸಚಿವ 16/01/2023

ವಿಷಯ ಸಂಖ್ಯೆ: 170·11

**ವಿಷಯ:–** ಶ್ರೀ ಪ್ರದೀಪ್.ಕೆ, ಪ್ರ.ದ.ಗು, ಆಡಳಿತ ವಿಭಾಗ, ಇವರ ತಾಯಿ ಮತ್ತು ಮಗನ ವೈದ್ಯಕೀಯ ವೆಚ್ಚ ಮತ್ತು ಶ್ರೀ ಗುರುಮಂಜುನಾಥ ಜಿ.ಸಿ, ಪರಿಚಾರಕ, ರವರು ಮತ್ತು ಅವರ ತಾಯಿಯವರ ವೈದ್ಯಕೀಯ ವೆಚ್ಚದ ಮರುಭರಿಕೆ ಕುರಿತು.

*–*–*–*

1. ಶ್ರೀ. ಪ್ರದೀಪ್, ಪ್ರ.ದ.ಗು, ಕರಾಮುವಿ ಇವರ ತಾಯಿಯವರಾದ ಶ್ರೀಮತಿ. ಮೀನಾಕ್ಷಮ್ಮ ಇವರಿಗೆ Fracture Right Femur ನಿಂದಾಗಿ Apollo BGS, Hospital, Mysuru ಇಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ ರೂ. 83,777/–ಗಳ ಮರುಭರಿಕೆಗಾಗಿ ಮತ್ತು ಇವರ ಮಗುವಿಗೆ Ashraya Hopital, Chikmagalur ಇಲ್ಲಿ Vaccination ಹಾಕಿಸಿರುವ ಹುಂಡಿಯ ಮೊತ್ತ ರೂ. 15,858/– ಗಳನ್ನು ಸಲ್ಲಿಸಿದ್ದು, ಒಟ್ಟಾರೆ ಮೊತ್ತ ರೂ. **83,777 + 15,858 = 99,635.00** ಗಳ ಮರುಭರಿಕೆ ದಿನಾಂಕ: 19.12.2022 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. **68,657 + 15458 = 84,115/-** ಗಳಾಗಿರುತ್ತದೆ.

2. ಶ್ರೀ. ಗುರುಮಂಜುನಾಥ.ಜಿ.ಸಿ, ಪರಿಚಾರಕ, ಕರಾಮುವಿ ಇವರಿಗೆ ಹರ್ನಿಯಾ ಮತ್ತು ಶ್ವಾಸಕೋಸದ ಸಮಸ್ಯೆಯಿಂದಾಗಿ JSS, Hospital, Mysuru ಇಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಯ ಒಟ್ಟು ಮೊತ್ತ ರೂ. 37,110/- ಗಳು ಮತ್ತು ಇವರ ತಾಯಿಯವರಾದ ಶ್ರೀಮತಿ ಕಾಳಮ್ಮನವರಿಗೆ ಪಾರ್ಶ್ವವಾಯು ಹಾಗೂ ಲಿವರ್‌ಗೆ ಸಂಬಂಧಿಸಿದ ಖಾಯಿಲೆಗೆ JSS, Hospital, Mysuru ಇಲ್ಲಿ ಚಿಕಿತ್ಸೆ ಪಡೆದ ಹುಂಡಿಯ ಮೊತ್ತ ರೂ. 3,156/– ಗಳ ಒಟ್ಟು ಮೊತ್ತ ರೂ. 37110 + 3156 = **40,266.00** ಗಳನ್ನು ಮರುಭರಿಕೆ ಮಾಡಿಕೊಡುವಂತೆ ದಿನಾಂಕ: 20.12.2022ರಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. 32818 + 1753 = **34,571/– ಗಳಾಗಿರುತ್ತದೆ.**

ವಿವಿ ನಿಲಯದ ಪರಿನಿಯಮ 23(3)ರಲ್ಲಿ ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರರಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1.00ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿ ನೌಕರರುಗಳ ಪ್ರಸ್ತುತ ವೈದ್ಯಕೀಯ ಹುಂಡಿಯ ಮೊತ್ತ 84,115/– ಗಳನ್ನು ಮತ್ತು ರೂ. 34,571/– ಗಳನ್ನು ಒಟ್ಟು ಮೊತ್ತ 1,18,686/– ಗಳನ್ನು ರೂ. 84,115+34,571=1,18,668/–ಗಳನ್ನು ಒಟ್ಟು ಪಾವತಿಸಲು ವೆಚ್ಚ ಹುಂಡಿಯನ್ನು ಮರುಭರಿಕೆ ಮಾಡುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

(signature) 16/01/2023
**ಕುಲಸಚಿವ**

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟಿದೆ)

ವಿಷಯ ಸಂಖ್ಯೆ: 170.12.

**ವಿಷಯ:-** ದಿವಂಗತ ಶ್ರೀ. ಮಹದೇವಯ್ಯ, ದ್ವಿದ.ಗು, ಕಾಲಿಕ ವೇತನ ಶ್ರೇಣಿ ನೌಕರರ ವೈದ್ಯಕೀಯ ವೆಚ್ಚದ ಮರುಭರಿಕೆ ಕುರಿತು.

*-*-*-*

ಶ್ರೀ. ಮಹದೇವಯ್ಯ, ದ್ವಿದ.ಗು, ಕಾಲಿಕ ವೇತನ ಶ್ರೇಣಿ ನೌಕರ, ಕರಾಮುವಿಯಲ್ಲಿ ಕಾರ್ಯ ನಿರ್ವಹಿಸಿದ್ದು, ಸದರಿಯವರು ಅನಾರೋಗ್ಯಕ್ಕೆ ತುತ್ತಾಗಿ ಜೆ.ಎಸ್.ಎಸ್ ಆಸ್ಪತ್ರೆ, ಮೈಸೂರಿನಲ್ಲಿ ಒಳರೋಗಿ ದಾಖಲಾಗಿ ನಂತರ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ದಿನಾಂಕ:17.07.2022 ರಂದು ನಿಧನ ಹೊಂದಿರುತ್ತಾರೆ. ಸದರಿಯವರ ಪತ್ನಿಯಾದ ಶ್ರೀಮತಿ ಮಂಗಳಮ್ಮರವರು ತಮ್ಮ ಪತಿಯ ವೈದ್ಯಕೀಯ ವೆಚ್ಚದ ಮನವಿ ಪತ್ರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಮರುಭರಿಕೆಯ ವೆಚ್ಚ ರೂ. 3,12,578/-ಗಳನ್ನು ನನ್ನ ಹೆಸರಿಗೆ ಪಾವತಿಸುವಂತೆ ಮನವಿ ಮಾಡಿಕೊಂಡಿರುತ್ತಾರೆ. ಸದರಿಯವರು ತಮ್ಮ ಪತಿಯ ಮರಣ ಪ್ರಮಾಣ ಪತ್ರ ಮತ್ತು ವಂಶವೃಕ್ಷ ಸಲ್ಲಿಸಿರುತ್ತಾರೆ.

ಸದರಿ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. **1,37,810**/-ಗಳಾಗಿರುತ್ತದೆ.

ವಿವಿ ನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ದಿವಂಗತ ಶ್ರೀ ಮಹದೇವಯ್ಯರವರ ಪತ್ನಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಅನುಕಂಪದ ಆಧಾರದ ಮೇಲೆ ವ್ಯವಸ್ಥಾಪನ ಮಂಡಳಿಯ ಅನುಮೋದನೆ ದಿನಾಂಕ: 26.08.2022ರ ಮತ್ತು ಮಾನ್ಯ ಕುಲಪತಿಗಳ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/951(ಎ)/2022-23, ದಿನಾಂಕ:19.10.2022ರಂತೆ ಶ್ರೀಮತಿ ಮಂಗಳಮ್ಮರವರಿಗೆ ತಾತ್ಕಾಲಿಕ ನೌಕರರಾಗಿ ಚಾಮರಾಜನಗರ ಪ್ರಾದೇಶಿಕ ಕೇಂದ್ರದಲ್ಲಿ, ಸ್ವಚ್ಚತಾ ನೌಕರರಾಗಿ ಕೆಲಸವನ್ನು ನೀಡಿರುತ್ತಾರೆ.

ಈ ಸಂಬಂಧವಾಗಿ ಸದರಿಯವರಿಗೆ ಮೇಲ್ಕಂಡ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. 1,37,810/-ಗಳನ್ನು ಒಟ್ಟು ಪಾವತಿಸಲು ವೈದ್ಯಕೀಯ ವೆಚ್ಚ ಹುಂಡಿಯನ್ನು ಮರುಭರಿಕೆ ಮಾಡುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

16/01/2023

**ಕುಲಸಚಿವ**

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟಿದೆ)

ವಿಷಯ ಸಂಖ್ಯೆ: 170.13

**ವಿಷಯ:** ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2021-22,ದಿನಾಂಕ:07.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಪೂರ್ಣ ಪ್ರಮಾಣದಲ್ಲಿ ಖಾಲಿಯಿರುವ ಅಧೀಕ್ಷಕ ಹುದ್ದೆಗೆ, ಹಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ನೌಕರರುಗಳನ್ನು ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಹಾಗೂ ವಿ.ವಿ.ನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮದ ಪ್ರಕಾರ ಶ್ರೀಮತಿ ಹೆಚ್. ಸಿ. ಯಶೋಧಮ್ಮ, ಹಿರಿಯ ಸಹಾಯಕ, ಇವರಿಗೆ ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಖಾಲಿಯಿರುವ ಅಧೀಕ್ಷಕ ಹುದ್ದೆಗೆ ಎದುರಾಗಿ ರೂ:43100-1100-46600-1250-53900-1450-62600-1650-72500-1900-83900ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿದ್ದು, ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ (ಪ್ರತಿ ಲಗತ್ತಿಸಿದೆ).

ಕುಲಸಚಿವ

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ವಿಷಯ ಸಂಖ್ಯೆ: 170.14

**ವಿಷಯ**: ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ**: ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2021-22,ದಿನಾಂಕ:25.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಪೂರ್ಣ ಪ್ರಮಾಣದಲ್ಲಿ ಖಾಲಿಯಿರುವ ಅರ್ಹ ನೌಕರರುಗಳನ್ನು ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಹಾಗೂ ವಿ.ವಿ.ನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮದ ಪ್ರಕಾರ ಶ್ರೀ ಸಿ ಎಂ. ಕೃಷ್ಣೇಗೌಡ, ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಖಾಲಿ ಇರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಖಾಲಿ ಇರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಎದುರಾಗಿ ರೂ: 30350-750 -32600-850-36000-950-39800-1100-46400-1250-53900-1450-58250 ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಆದೇಶವನ್ನು ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170.15

**ವಿಷಯ:** ನೇರ ನೇಮಕಾತಿಗೆ ಮೀಸಲಿರಿಸಿದ್ದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2022-23,ದಿನಾಂಕ:25.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ, ಮಾನ್ಯ ಕುಲಪತಿಗಳು "Approval to Consider the Promotion for SDC,TCC, & DEO to FDC As per the Statute Direct recruitment post is available hence these Post is consider for Promotion & maintain Roster & Seniority among 32 Direct recruitment Post Convert 30 Post for Promotion & take approval in next BOM and also take undertaking in 100 Rs Bond Paper by the Candidates if there is any objections same may be withdrawn"ಎಂದು ಆದೇಶಿಸಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಪ್ರಸ್ತುತ ದ್ವಿತೀಯ ದರ್ಜೆ ಗುಮಾಸ್ತ/ಡಿ.ಇ.ಒ.,ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 30 ಮಂದಿ ಸಿಬ್ಬಂದಿವರ್ಗದವರಿಗೆ ರೂ.30350-750-32600-850-36000-950-39800 -1100-46400-1250-53900-1450-58250ರ ವೇತನ ಶ್ರೇಣಿಯಲ್ಲಿ ನೇರ ನೇಮಕಾತಿಗೆ ಮೀಸಲಿರಿಸಿರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಕುಲಸಚಿವ

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ವಿಷಯ ಸಂಖ್ಯೆ: 170.16

**ವಿಷಯ:** ಹಿರಿಯ ಸಹಾಯಕ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/950/2022-23,ದಿನಾಂಕ:28.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಟಿಯಿಂದ ಮಾನ್ಯ ಕುಲಸಚಿವರು "ಜೇಷ್ಠತೆಯಲ್ಲಿ ಹೈದ್ರಾಬಾದ್-ಕರ್ನಾಟಕ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ 371(ಜೆ) ಹುದ್ದೆಗೆ ಮೀಸಲಿರಿಸಿರುವ ಹುದ್ದೆಗಳನ್ನೂ ಒಳಗೊಂಡಂತೆ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗಳಿಗೆ ಪ್ರ.ದ.ಗು. ಹುದ್ದೆಯಲ್ಲಿ ಹಿಂದಿನ ಸ್ವತಂತ್ರ ಪ್ರಭಾರ ಸೇವೆಯನ್ನು ಪರಿಗಣಿಸಿ ಪದೋನ್ನತಿ ನೀಡಬಹುದಾಗಿದ್ದು" ಎಂದು ಮಂಡಿಸಿದ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಪ್ರಸ್ತುತ ಪ್ರದಗು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 08 ಮಂದಿ ಸಿಬ್ಬಂದಿವರ್ಗದವರಿಗೆ 371(ಜೆ)ರಡಿ ಮೀಸಲಿರಿಸಿರುವ ಹುದ್ದೆಗಳನ್ನೂ ಒಳಗೊಂಡಂತೆ ಪರಿನಿಯಮ-36 ರನ್ವಯ, ರೂ:37900-950-39800-1100-46400-1250-53900-1450-62600-1650-70850 ರ ವೇತನ ಶ್ರೇಣಿಯಲ್ಲಿ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170.17

**ವಿಷಯ:** ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2021-22,ದಿನಾಂಕ:29.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಪೂರ್ಣ ಪ್ರಮಾಣದಲ್ಲಿ ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ 08 ಶೀಘ್ರಲಿಪಿಗಾರ ಹುದ್ದೆ ಮಂಜೂರಾಗಿದ್ದು, ವಿವಿ ಅಧಿಸೂಚನೆ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/883/2013-14/ಸಿ.ನಂ:1308, ದಿನಾಂಕ: 27.10.2017ರನ್ವಯ ಹೊರಡಿಸಲಾದ ಅಧಿಸೂಚನೆಯಲ್ಲಿ ಶೀಘ್ರಲಿಪಿಗಾರ ಹುದ್ದೆಯ ನೇರ ನೇಮಕಾತಿಗೆ 04 ಹುದ್ದೆಗಳನ್ನು ಹಾಗೂ ಪದೋನ್ನತಿಗೆ 04 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರ, ಶೀಘ್ರಲಿಪಿಗಾರ ಹುದ್ದೆಗೆ 25% by promotion from among Typist-Cum-Assistant and 25% by promotion among Data Entry operators-Cum-Assistants who possess the qualification prescribed under column(4) and must have put in a total service for a period of not less than 3 years excluding the period of probation/officiation in the cadre of Typist-cum-Assistant/ DEO-cum-Assistant in KSOU ಎಂದಿರುತ್ತದೆ.

ಪ್ರಸ್ತುತ ರಾಜ್ಯ ಸರ್ಕಾರವು ಹೊರಡಿಸಿರುವ ದಿನಾಂಕ: 10.07.2019ರ ರಾಜ್ಯ ಪತ್ರ ಹಾಗೂ ದಿನಾಂಕ: 24.03.2021 ರ ಅಧಿಸೂಚನೆಯಲ್ಲಿ, ಶೀಘ್ರಲಿಪಿಗಾರರ ಹುದ್ದೆಯ ನೇರ ನೇಮಕಾತಿ ಹಾಗೂ ಪದೋನ್ನತಿಗೆ ಮಾನದಂಡ ಹಾಗೂ ವಿದ್ಯಾರ್ಹತೆಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಕ್ಕೆ ಶೀಘ್ರಲಿಪಿಗಾರ ಹುದ್ದೆಯ ವಿದ್ಯಾರ್ಹತೆ ಭಾಗಶಃ ತಿದ್ದುಪಡಿ ಮಾಡುವಂತೆ ಪರಿನಿಯಮವನ್ನು ಸಲ್ಲಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿ) ಪರಿನಿಯಮ-2022ಕ್ಕೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ಶ್ರೀ ವಿ. ಶ್ರೀನಿವಾಸ, ಡಿ.ಇ.ಓ ಇವರಿಗೆ ಖಾಲಿ ಇವರು ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ಖಾಲಿ ಇರುವ ಶೀಘ್ರಲಿಪಿಗಾರ ಹುದ್ದೆಗೆ ಎದುರಾಗಿ (ಶೀಘ್ರಲಿಪಿಗಾರ ಹುದ್ದೆಯ ಪರಿನಿಯಮ ಭಾಗಶಃ ತಿದ್ದುಪಡಿ) ಪರಿನಿಯಮ-2022ಕ್ಕೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ರೂ. 30350-750-32600-850-36000-950-39800-1100-46400-1250-53900-1450-58250 ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170-18

**ವಿಷಯ:** ಹಿರಿಯ ಸಹಾಯಕ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/950/2022-23,ದಿನಾಂಕ:28.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಮಾನ್ಯ ಕುಲಸಚಿವರು "ಜೇಷ್ಠತೆಯಲ್ಲಿ ಹೈದ್ರಾಬಾದ್-ಕರ್ನಾಟಕ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ, 371(ಜೆ) ಹುದ್ದೆಗೆ ಮೀಸಲಿರಿಸಿರುವ ಹುದ್ದೆಗಳನ್ನೂ ಒಳಗೊಂಡಂತೆ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗಳಿಗೆ ಪ್ರ.ದ.ಗು. ಹುದ್ದೆಯಲ್ಲಿ ಹಿಂದಿನ ಸ್ವತಂತ್ರ ಪ್ರಭಾರ ಸೇವೆಯನ್ನು ಪರಿಗಣಿಸಿ ಪದೋನ್ನತಿ ನೀಡಬಹುದಾಗಿದ್ದು" ಎಂದು ಸಲ್ಲಿಸಿದ ಪ್ರಸ್ತಾವನೆಗೆ ಕಡತ ಸಂಖ್ಯೆ 950 ಪುಟ ಸಂಖ್ಯೆ 89, ಕಂಡಿಕೆ 191 ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುತ್ತಾರೆ. ಅದರಂತೆ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ತಿಮ್ಮಯ್ಯ ಕೆ, ಪ್ರ.ದ.ಗು ಹಾಗೂ ಶ್ರೀಮತಿ ಪೂರ್ಣಿಮಾ, ಪ್ರ.ದ.ಗು ಇವರಿಗೂ ಸಹ ಪದೋನ್ನತಿಗೆ ಪರಿಗಣಿಸಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ, ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಪ್ರಸ್ತುತ ಪ್ರ.ದ.ಗು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ತಿಮ್ಮಯ್ಯ ಕೆ, ಪ್ರ.ದ.ಗು ಹಾಗೂ ಶ್ರೀಮತಿ ಪೂರ್ಣಿಮಾ, ಪ್ರ.ದ.ಗು ಇವರಿಗೆ 371(ಜೆ)ರಡಿ ಮೀಸಲಿರಿಸಿರುವ ಹುದ್ದೆಗಳನ್ನೂ ಒಳಗೊಂಡಂತೆ ಪರಿನಿಯಮ-36 ರನ್ವಯ, ರೂ:37900-950-39800-1100-46400-1250-53900-1450-62600-1650-70850ರ ವೇತನ ಶ್ರೇಣಿಯಲ್ಲಿ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170 · 19

**ವಿಷಯ**: ಸಹಾಯಕ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ**: ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2021-22,ದಿನಾಂಕ:31.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಮಾನ್ಯ ಕುಲಸಚಿವರು ಸಲ್ಲಿಸಿದ ಪ್ರಸ್ತಾವನೆಯಲ್ಲಿ "ನ್ಯಾಯಾಲಯದ ಆದೇಶಗಳ ಷರತ್ತಿಗೊಳ್ಳಪಟ್ಟು ಹಿಂದಿನ ಬ್ಯಾಚ್ ನಲ್ಲಿ ಸದರಿ ನೌಕರರು ಪದೋನ್ನತಿಗೆ ಅರ್ಹರಾಗಿದ್ದರೆ ಅದೇ ದಿನಾಂಕದಿಂದ ಪದೋನ್ನತಿ ನೀಡಬಹುದಾಗಿದ್ದು" ಎಂದು ಉಲ್ಲೇಖಿಸಿದ್ದು, ಸದರಿ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಅನುಮೋದಿಸಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ನೌಕರರನ್ನು ಮಾನ್ಯ ಕುಲಪತಿಗಳ ಆದೇಶದನ್ವಯ ದಿನಾಂಕ:07.03.2022ರಂದು ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿತ್ತು, ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಹಾಗೂ ಮಾನ್ಯ ಕುಲಪತಿಗಳ ಆದೇಶದನುಸಾರ ಅಮಾನತ್ತಿನ ಆದೇಶವನ್ನು ಹಿಂಪಡೆದು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಆದೇಶಿಸಲಾಗಿರುತ್ತದೆ.

ಈ ಸಂಬಂಧ ಸದರಿ ನೌಕರರು ಅಮಾನತ್ತು ಹಾಗೂ ಸಿಸಿಎ ನಿಯಮದಡಿ ಮಾಡಲಾದ ಆರೋಪವನ್ನು ಪ್ರಶ್ನಿಸಿ ಸದರಿ ಆದೇಶಗಳನ್ನು ರದ್ದುಪಡಿಸುವಂತೆ ಮಾನ್ಯ ಉಚ್ಛನ್ಯಾಯಾಲಯದಲ್ಲಿ ಕ್ರಮವಾಗಿ W.P No. 14673/2022 & 6294/2022 ದಾವೆ ಹೂಡಿದ್ದು, ಸದರಿ ಪ್ರಕರಣಗಳು ನ್ಯಾಯಲಯದಲ್ಲಿ ಬಾಕಿ ಇರುತ್ತವೆ. ಈ ಹಿನ್ನೆಲೆಯಲ್ಲಿ ಶ್ರೀ ಬಿ.ಜಿ.ವಿರುಪಾಕ್ಷಯ್ಯ ಇವರಿಗೆ ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಹಾಗೂ ನ್ಯಾಯಾಲಯದ ಅಂತಿಮ ಆದೇಶಗಳ ಷರತ್ತಿಗೊಳ್ಳಪಟ್ಟು ಪದೋನ್ನತಿಯನ್ನು ಹಿಂಪಡೆಯುವ ಸಂಬಂಧ 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಪ್ರಸ್ತುತ ಅಧೀಕ್ಷಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಿ.ಜಿ.ವಿರುಪಾಕ್ಷಯ್ಯ ಇವರಿಗೆ ಪರಿನಿಯಮ -36 ರನ್ವಯ, ರೂ:52650-1250-53900-1450-62600-1650-72500-1900-83900-2200-97100ರ ವೇತನ ಶ್ರೇಣಿಯಲ್ಲಿ ಖಾಲಿ ಇರುವ ಸಹಾಯಕ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170.20

**ವಿಷಯ:** ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2022-23,ದಿನಾಂಕ:31.10.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಪೂರ್ಣ ಪ್ರಮಾಣದಲ್ಲಿ ಖಾಲಿಯಿರುವ ಅಧೀಕ್ಷಕ ಹುದ್ದೆಗೆ, ಹಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ನೌಕರರುಗಳನ್ನು ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಹಾಗೂ ವಿ.ವಿ.ನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮದ ಪ್ರಕಾರ ಶ್ರೀ ಪುಟ್ಟಸ್ವಾಮಿ ಸಿ.ಕೆ.. ಹಿರಿಯ ಸಹಾಯಕ, ಇವರಿಗೆ ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಖಾಲಿಯಿರುವ ಅಧೀಕ್ಷಕ ಹುದ್ದೆಗೆ ಎದುರಾಗಿ ರೂ:43100-1100-46600-1250-53900-1450-62600-1650-72500-1900-83900ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170.21

**ವಿಷಯ**: ಸಹಾಯಕ ಅಭಿಯಂತರ (ಸಿವಿಲ್) ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ**: ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/740/2022-23,ದಿನಾಂಕ:02.11.2022.

***

ವಿಶ್ವವಿದ್ಯಾನಿಲಯವು ವಿವಿಧ ಹುದ್ದೆಗಳಿಗೆ ತನ್ನದೇ ಆದ ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ನು ರಚಿಸಿಕೊಂಡು ಉಲ್ಲೇಖ-1 ರಂತೆ ಅಭಿಯಂತರ ಹುದ್ದೆಗಳಿಗೆ ಪರಿನಿಯಮವನ್ನು ರಚಿಸಿ, ಉಲ್ಲೇಖ-2ರಂತೆ ಅಧಿಸೂಚನೆಯನ್ನು ಹೊರಡಿಸಿದ್ದು, ಪ್ರಸ್ತುತ ಈ ಪರಿನಿಯಮವು ಚಾಲ್ತಿಯಲ್ಲಿರುತ್ತದೆ. ದಿನಾಂಕ: 25.03.2022ರ ಕಚೇರಿ ಆದೇಶದನ್ವಯ ಶ್ರೀ ಸದಾಶಿವ ವಿ, ಇವರಿಗೆ ದಿನಾಂಕ: 18.05.2015ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಕಿರಿಯ ಅಭಿಯಂತರರು (ಸಿವಿಲ್) ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ.

ಮುಂದುವರಿದು, ಸದರಿಯವರು ಸಹಾಯಕ ಅಭಿಯಂತರ ಹುದ್ದೆಗೆ ಪದೋನ್ನತಿ ನೀಡುವಂತೆ ಮನವಿ ಸಲ್ಲಿಸಿದ್ದು, 'ಖಾಲಿ ಇರುವ ಹುದ್ದೆಗೆ ಪದೋನ್ನತಿ ನೀಡಬಹುದು' ಎಂಬ ಕುಲಸಚಿವರ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರಸಿಕೊಂಡು ಕರಾಮುವಿ ನಿಲಯದಲ್ಲಿ ಕಿರಿಯ ಅಭಿಯಂತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸದಾಶಿವ ವಿ, ಇವರಿಗೆ ಪರಿನಿಯಮದನ್ವಯ ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿ ಖಾಲಿಯಿರುವ ಸಹಾಯಕ ಅಭಿಯಂತರ(ಸಿವಿಲ್) ಹುದ್ದೆಗೆ ಎದುರಾಗಿ ರೂ:43100-110046400-1250-53900-1450-62600-1650-72500-1900-83900ರ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ಕುಲಸಚಿವ

ವಿಷಯ ಸಂಖ್ಯೆ: 170.22

**ವಿಷಯ:** ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ:** ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2022-23,ದಿನಾಂಕ:04.11.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಟಿಯಿಂದ ಪೂರ್ಣ ಪ್ರಮಾಣದಲ್ಲಿ ಖಾಲಿಯಿರುವ ಅರ್ಹ ನೌಕರರುಗಳನ್ನು ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಹಾಗೂ ವಿ.ವಿ.ನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮದ ಪ್ರಕಾರ ಹಾಲಿ ಪದೋನ್ನತಿ ಹೊಂದಿ ಖಾಲಿಯಾಗಿರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳಿಗೆ ಸದರಿ ನೌಕರರ ಮನವಿಯನ್ನು ಪರಿಗಣಿಸಿ ಷರತ್ತುಗಳಿಗೆ ಒಳಪಟ್ಟು ಮುಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಸಮರ್ಥನೆ ಪಡೆಯುವ ಷರತ್ತಿಗೊಳಪಟ್ಟು ಖಾಲಿ ಇರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರೆಸಿಕೊಂಡು ಪ್ರಸ್ತುತ ದ್ವಿತೀಯ ದರ್ಜೆ ಗುಮಾಸ್ತ/ಡಿ.ಇ.ಒ.,ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 10 ಮಂದಿ ಸಿಬ್ಬಂದಿವರ್ಗದವರಿಗೆ ರೂ.30350-750-32600-850-36000-950-39800-1100-46400-1250-53900-1450-58250ರ ವೇತನ ಶ್ರೇಣಿಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಎದುರಾಗಿ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಕುಲಸಚಿವ

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ವಿಷಯ ಸಂಖ್ಯೆ: 170.23

**ವಿಷಯ**: ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು.

**ಉಲ್ಲೇಖ**: ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/776/2022-23,ದಿನಾಂಕ:05.11.2022.

***

ವಿಶ್ವವಿದ್ಯಾನಿಲಯದಲ್ಲಿನ ಸುಸೂತ್ರ ಆಡಳಿತ ನಿರ್ವಹಣೆಗೆ ಪೂರಕವಾದಂತೆ ವಿವಿಧ ವಿಭಾಗಗಳಲ್ಲಿನ ಸೇವೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಕಾರ್ಯದೊತ್ತಡವನ್ನು ಸರಿದೂಗಿಸುವ ದೃಷ್ಠಿಯಿಂದ ಪೂರ್ಣ ಪ್ರಮಾಣದಲ್ಲಿ ಖಾಲಿಯಿರುವ ಅರ್ಹ ನೌಕರರುಗಳನ್ನು ಅಂತರ್ ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಹಾಗೂ ವಿ.ವಿ.ನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮದ ಪ್ರಕಾರ ಹಾಲಿ ಪದೋನ್ನತಿ ಹೊಂದಿ ಖಾಲಿಯಾಗಿರುವ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗೆ ಸದರಿ ನೌಕರರ ಮನವಿಯನ್ನು ಪರಿಗಣಿಸಿ ಷರತ್ತುಗಳಿಗೆ ಒಳಪಟ್ಟು ಮುಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಸಮರ್ಥನೆ ಪಡೆಯುವ ಷರತ್ತಿಗೊಳಪಟ್ಟು ಖಾಲಿ ಇರುವ ದ್ವೀತಿಯ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮುಂದೆ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ ಪದೋನ್ನತಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು 100 ರೂಗಳ ಛಾಪ ಕಾಗದದಲ್ಲಿ ಮುಚ್ಚಳಿಕೆ ಬರೆಸಿಕೊಂಡು ಪ್ರಸ್ತುತ ಪರಿಚಾರಕ/ಸ್ವೀಪರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 05 ಮಂದಿ ಸಿಬ್ಬಂದಿವರ್ಗದವರಿಗೆ ರೂ: 21400-500-22400-550-24600-600-27000-650-29600-750-32600-850-36000- 950-39800-1100-42000ರ ವೇತನ ಶ್ರೇಣಿಯಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಎದುರಾಗಿ ಪದೋನ್ನತಿ ನೀಡಿ ಆದೇಶ ಹೊರಡಿಸಿ ಕ್ರಮವಹಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಕುಲಸಚಿವ

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ವಿಷಯ ಸಂಖ್ಯೆ : 170.24

**ವಿಷಯ: 23ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

*****

ದಿನಾಂಕ: 28–12–2022 ರಂದು ನಡೆದ 23ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಮುಂಬರುವ 170ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಕುಲಸಚಿವ**

**(ವಿಷಯ ಮಂಡನೆಗೆ ಕುಲಪತಿಗಳ ಅನುಮೋದನೆ ಪಡೆಯಲಾಗಿದೆ)**

ವಿಷಯ ಸಂಖ್ಯೆ: 170. 25

ವಿಷಯ: ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳ ಕಛೇರಿ ಉಪಯೋಗಳಿಗೆ ಅವಶ್ಯವಿರುವ 150 Desktop computer ಗಳನ್ನು ಖರೀದಿಸುವ ಬಗ್ಗೆ.

******

ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳ ದೈನಂದಿನ ಕಛೇರಿ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು, ವಿವಿಧ ವಿಭಾಗಗಳಿಂದ ಬಂದಿರುವ ಬೇಡಿಕೆಗಳಿಗನುಸಾರ ಅವಶ್ಯವಿರುವ 150 Desktop computer ಗಳನ್ನು ಖರೀದಿಸಲು ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ, ಈ ಹಿಂದೆ Digital Evaluation ಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಿಸಿ, ಈ ಕೆಳಕಂಡ Specifications ಉಳ್ಳ Desktop computer ಗಳನ್ನು, ಎಲ್ಲಾ ತೆರಿಗೆ ಸೇರಿದಂತೆ ಒಂದು computer ಗೆ ರೂ.96,989/– (ತೊಂಬತ್ತಾರು ಸಾವಿರದ ಒಂಬೈನೂರ ಎಂಬತ್ತೊಂಬತ್ತು ಮಾತ್ರ) ಗಳಲ್ಲಿ ಖರೀದಿಸಲಾಗಿರುತ್ತದೆ.

- **Processor**: Up to 11th/12th Generation Intel® Core™ i5-1135G7 Processor )
- **Operating System:** Windows 10/11 Professional
- **MS Office 16**
- **Memory:** Up to 8GB DDR4
- **Storage:** 256GB SSD, 1TB 5400 RPM HDD
- **Connectivity:** 802.11AC (1x1) WiFi + Bluetooth® 4.0
- **Display**: 23" FHD
- **Warranty:** 3 years On-site Comprehensive OEM Warranty
- **Antivirus**: 3 years subscription

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅವಶ್ಯವಿರುವ 150 Desktop computer ಗಳಿಗೆ ಸರಿಸುಮಾರು ಒಟ್ಟು ಮೊತ್ತ ರೂ.1,45,48,350 (ಒಂದು ಕೋಟಿ ನಲವತ್ತೈದು ಲಕ್ಷದ ನಲವತ್ತೆಂಟು ಸಾವಿರದ ಮುನ್ನೂರ ಐವತ್ತು ರೂಪಾಯಿಗಳು ಮಾತ್ರ) ಗಳಾಗುತ್ತದೆಂದು ಅಂದಾಜಿಸಿದ್ದು, ಈ ಸಂಬಂಧ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿ ಪ್ರಕ್ರಿಯೆಗೆ ಕ್ರಮವಹಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

(ಕರಡು ಪ್ರತಿಯನ್ನು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ಕುಲಸಚಿವರು

ವಿಷಯ ಸಂಖ್ಯೆ: 170:26

ವಿಷಯ: ಕರಾಮುವಿ ಅಧಿಕೃತ website ನಲ್ಲಿ ವಿವಿಯ ಸ್ವಂತ ಕಟ್ಟಡಗಳ 360° Photography, Virtual Tour create ಮಾಡಿ upload ಮಾಡುವ ಬಗ್ಗೆ.

*******

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ 28.12.2022 ರಂದು ತಾಂತ್ರಿಕ ಪರಿಣಿತರ ಸಮಿತಿ ಸಭೆ ನಡೆದಿದ್ದು, ಸದರಿ ಸಭೆಯಲ್ಲಿ TRAYI Creations, Mysuru ರವರು ಕಟ್ಟಡಗಳ Virtual tour ಹಾಗೂ 360° Photography ಬಗ್ಗೆ ಡೆಮೊ ನೀಡಿರುತ್ತಾರೆ. ಸದರಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.

Key features of the software are:

- Website development
- 360° photography of the building and thereby creating virtual tour of every building seminar hall.

The committee recommended for having virtual tour photos to be adopted in the KSOU website and thereby enhancing the features required to go for NAAC accreditation.

TRAYI Creations, Mysuru ರವರು ವಿವಿಯ ವಿವಿಧ ಸ್ವಂತ ಕಟ್ಟಡಗಳ 360° photography & Virtual tourಗೆ ಸಂಬಂದಿಸಿದಂತೆ ತಗಲುವ ಅಂದಾಜು ವೆಚ್ಚವನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

| Building Name | Cost for 360° photography &virtual tour |
|---|---|
| KSOU main campus | 26,15,000 |
| Bellary | 4,66,000 |
| Mandakkalli, Mysuru | 5,15,000 |
| Vijayanagar, Mysuru | 3,46,000 |
| Tumkuru | 5,95,400 |
| Shivamogga | 5,49,000 |
| Mandya | 5,41,000 |
| Kolar | 5,60,000 |
| Hassan | 5,30,000 |
| Chikkamagaluru | 4,97,000 |
| Chamarajanagar | 5,10,000 |
| Ramanagara | 4,89,000 |
| Total | 82,13,400 |
| Over All Total with GST@18% | 96,91,812 |

ಈ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.)

ಕುಲಸಚಿವರು

ವಿಷಯ ಸಂಖ್ಯೆ: 170.27.

ವಿಷಯ: ವಿವಿಯ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಡಿಜಿಟಲ್ ಮಾರ್ಕೆಟಿಂಗ್ ಮೂಲಕ ಪ್ರಚಾರಗೊಳಿಸುವ ಬಗ್ಗೆ.

* * * * *

ವಿವಿಯ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಪ್ರಸ್ತುತ ಜಾಲತಾಣ/ಮಾಧ್ಯಮದ ಮುಖಾಂತರ ಜಾಹೀರಾತು ನೀಡಿ ಪ್ರಚಾರವನ್ನು ನೀಡುತ್ತ ಬರಲಾಗಿದೆ. ಮುಂದುವರೆದು, ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯವಾಕ್ಯದೊಂದಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಇಚ್ಚಿಸುವಂತಹ ವಿದ್ಯಾರ್ಥಿಗಳು ನಮ್ಮ ವಿವಿಯಲ್ಲಿನ ಸ್ನಾತಕ/ಸ್ನಾತಕೊತ್ತರ ಪದವಿಯನ್ನು ಪಡೆಯಬಹುದಾದ ಅಂಶವನ್ನು ಜಗತ್ತಿನ ಬಹಳಷ್ಟು ವಿದ್ಯಾರ್ಥಿಗಳನ್ನು ತಲುಪಲು ಡಿಜಿಟಲ್ ಮಾರ್ಕೆಟಿಂಗ್ ಅತ್ಯಂತ ಉಪಯುಕ್ತವಾಗಿರುತ್ತದೆ. ಈಗ ಪ್ರಸ್ತುತವಿರುವ ಮಾಧ್ಯಮ ಜಾಹೀರಾತಿನ ಜೊತೆಗೆ ಡಿಜಿಟಲ್ ಮಾರ್ಕೆಟಿಂಗ್‌ನ ಸಹಯೋಗದಿಂದ ಹೆಚ್ಚಿನ ವಿದ್ಯಾರ್ಥಿಗಳನ್ನು ತಲುಪಬಹುದು ಹಾಗೂ ಪ್ರವೇಶಾತಿಯನ್ನು ಹೆಚ್ಚಿಸಬಹುದು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಪ್ರವೇಶಾತಿಯನ್ನು ಹೆಚ್ಚಿಸಲು ಡಿಜಿಟಲ್ ಮಾರ್ಕೆಟಿಂಗ್ ಉಪಯುಕ್ತವಾಗಿರುತ್ತದೆ ಎಂಬ ಅಂಶವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಈ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ)

ಕುಲಸಚಿವ

ವಿಷಯ ಸಂಖ್ಯೆ: 170.28.

ವಿಷಯ : 2022-23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಯ ಬಗೆಗೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಶುಲ್ಕ ವಿನಾಯಿತಿಯಡಿಯಲ್ಲಿ ಪ್ರವೇಶಾತಿಯನ್ನು ನೀಡಲಾಗಿತ್ತು Direct Benifit transfer Scheme ಅನ್ವಯ ಶುಲ್ಕ ವಿನಾಯಿತಿಯಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ವಿದ್ಯಾರ್ಥಿಗಳ ವೈಯಕ್ತಿಕ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿದೆ.

ವಿದ್ಯಾರ್ಥಿಗಳು ವಿವಿ ಖಾತೆಗೆ ಶುಲ್ಕ ಪಾವತಿಸದಿರುವ ಮಾಹಿತಿಯನ್ನು ಕರಾಮುವಿಯ ವಿದ್ಯಾರ್ಥಿ ವೇತನ ಘಟಕ ಇವರು ನೀಡಿರುವಂತೆ 2018-19 ರಿಂದ 2021-22ನೇ ಶೈಕ್ಷಣಿಕ ಸಾಲಿನವರೆಗೆ ಉಚಿತ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಒಟ್ಟು 2,252 ವಿದ್ಯಾರ್ಥಿಗಳ ಒಟ್ಟು ಬಾಕಿ ಶುಲ್ಕ ರೂ- **1,19,55,481/-** (ಒಂದು ಕೋಟಿ ಹತ್ತೊಂಬತ್ತು ಲಕ್ಷದ ಐವತ್ತೈದು ಸಾವಿರದ ನಾಲ್ಕು ನೂರ ಎಂಭತ್ತೊಂದು) ರೂಗಳು ವಿವಿಗೆ ಪಾವತಿಯಾಗಬೇಕಾಗಿರುತ್ತದೆ, 2022-23ನೇ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕೆಂಬುವುದರ ಬಗ್ಗೆ ವಿಷಯವನ್ನು ಮಾನ್ಯ ವ್ಯವಸ್ಥಾಪನ ಮಂಡಳಿಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿನಂತಿಸಿದೆ.

ಕರಡು ಪ್ರತಿಯು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ,

ಕುಲಸಚಿವರು

ವಿಷಯ ಸಂಖ್ಯೆ : 170·29

ವಿಷಯ: ವಿವಿನಿಲಯದ ಇಂಜಿನಿಯರಿಂಗ್ ವಿಭಾಗದಿಂದ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಕಾಮಗಾರಿಗಳ ಬಗ್ಗೆ.

ವಿವಿನಿಲಯದ ವಿಜಯನಗರ 3ನೇ ಹಂತದಲ್ಲಿರುವ ಶೈಕ್ಷಣಿಕ ಕಟ್ಟಡವನ್ನು ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳನ್ನಾಗಿ ಮಾರ್ಪಡಿಸಬೇಕಾಗಿದ್ದು ವಿಭಾಗಗಳ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಮೂಲಭೂತ ಸೌಕರ್ಯ ಒದಗಿಸಲು ಸಿಬ್ಬಂದಿ ವರ್ಗದವರಿಗೆ ಅಲ್ಯೂಮಿನಿಯಂ ಪಾರ್ಟಿಷಿಯನ್‌ನಿಂದ ಕೊಠಡಿಗಳನ್ನು ನಿರ್ಮಿಸಬೇಕಿರುತ್ತದೆ ಹಾಗೂ ನ್ಯಾಕ್ ಕಮಿಟಿರವರು ಪರಿವೀಕ್ಷಣೆಗೆ ಆಗಮಿಸುತ್ತಿರುವುದರಿಂದ ಕಟ್ಟಡವನ್ನು ಸುಸ್ಥಿತಿಯಲ್ಲಿಡುವುದರ ದೃಷ್ಟಿಯಿಂದ ಈಗಾಗಲೇ ಕಟ್ಟಡವು 10 ರಿಂದ 12 ವರ್ಷದಾಗಿದ್ದು ಬಣ್ಣವು ಮಾಸಿಹೋಗಿರುತ್ತದೆ. ಆದ ಕಾರಣ ಕಟ್ಟಡಕ್ಕೆ ಪೇಂಟಿಂಗ್ ಕೆಲಸ ಹಾಗೂ ವಾಟರ್ ಪ್ರೂಫಿಂಗ್ ಕೆಲಸ ನಿರ್ವಹಿಸಬೇಕಾಗಿರುತ್ತದೆ.

ವಿವಿನಿಲಯದ ಪ್ರಾದೇಶಿಕ ಕೇಂದ್ರ ಕಟ್ಟಡಗಳ (ದಾವಣಗೆರೆ ಮತ್ತು ಬಳ್ಳಾರಿ) ಪೇಂಟಿಂಗ್ ಮಾಸಿಹೋಗಿರುವುದರ ಕಾರಣ ಸದರಿ ಕಟ್ಟಡಗಳಿಗೆ ಪೇಂಟಿಂಗ್ ಹಾಗೂ ಇತರೇ ದುರಸ್ಥಿ ಕಾರ್ಯ ನಿರ್ವಹಿಸಬೇಕಿರುತ್ತದೆ.

ನ್ಯಾಕ್ ಕಮಿಟಿರವರು ಮಾನ್ಯತೆ ನೀಡುವ ಸಂಬಂಧ ವಿವಿನಿಲಯಕ್ಕೆ ಪರಿವೀಕ್ಷಣೆಗೆ ಆಗಮಿಸುತ್ತಿರುವುದರಿಂದ ಆವರಣದಲ್ಲಿರುವ ಆಡಳಿತ ಭವನ, ಘಟಿಕೋತ್ಸವ ಭವನ ಹಾಗೂ ಪರೀಕ್ಷಾ ಭವನದ ಕಟ್ಟಡಗಳಿಗೆ ಪೇಂಟಿಂಗ್ ಕಾರ್ಯ ಹಾಗೂ ಇತರೆ ದುರಸ್ಥಿ ಕಾರ್ಯ ನಿರ್ವಹಿಸಬೇಕಿರುತ್ತದೆ.

ವಿವಿನಿಲಯದ ಆವರಣದಲ್ಲಿರುವ ಮಹಿಳಾ ವಿದ್ಯಾರ್ಥಿನಿಲಯವನ್ನು ನ್ಯಾಕ್ ಮಾನದಂಡದ ಅನುಸಾರ ಡೇ ಕೇರ್ ಸೆಂಟರ್ ಹಾಗೂ ಲೇಡಿಸ್ ಕಾಮನ್ ರೂಂಗಳಾಗಿ ನವೀಕರಣವಾಗಬೇಕಿದ್ದು ಹಾಗೂ ಎಲ್ಲಾ ಕುಟೀರಗಳಿಗೂ ಅವಶ್ಯಕವಾದ ಬೆಡ್‌ಗಳನ್ನು ಒದಗಿಸಬೇಕಾಗಿರುತ್ತದೆ.

ನ್ಯಾಕ್ ಮಾನ್ಯತೆ ಪಡೆಯುವ ಸಂಬಂಧ ಹಾಗೂ ವಿವಿನಿಲಯದ ನಿತ್ಯ ಕಾರ್ಯ ಚಟುವಟಿಕೆಗೆ ಸಹಕಾರವಾಗುವಂತೆ ವಿವಿನಿಲಯದ ಆವರಣದಲ್ಲಿ Intelligent Centralized Campus And Exam Surveillance System ಅಳವಡಿಸಬೇಕಿರುತ್ತದೆ.

ನ್ಯಾಕ್ ಮಾನ್ಯತೆ ಪಡೆಯುವ ಸಂಬಂಧ ಪ್ರಮುಖ ನಿಬಂಧನೆಯಲ್ಲಿ ಒಂದಾದ ವಿವಿನಿಲಯದ ಆವರಣದಲ್ಲಿ ಎಲ್‌ಇಡಿ ಲೈಟ್ಸ್ ಅಳವಡಿಸಬೇಕೆಂದು CIQA ನಿರ್ದೇಶಕರು ಮೌಖಿಕವಾಗಿ ಸೂಚಿಸಿರುತ್ತಾರೆ. ಈ ಸಂಬಂಧ ವಿವಿನಿಲಯದ ಕಟ್ಟಡಗಳಲ್ಲಿ ಎಲ್‌ಇಡಿ ಲೈಟ್ಸ್ ಅಳವಡಿಸಬೇಕಾಗಿರುತ್ತದೆ.

ವಿವಿನಿಲಯದ ಅತಿಥಿಗೃಹ, ಪುರುಷರ ವಿದ್ಯಾರ್ಥಿ ನಿಲಯ, ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವಿರುವ ಹಾಸಿಗೆಯು 10 ರೀಮದ 12 ವರ್ಷ ಹಳೆಯದಾಗಿದ್ದು ತುರ್ತಾಗಿ ಹಾಸಿಗೆ ಮತ್ತು ದಿಂಬುಗಳನ್ನು ಬದಲಾವಣೆ ಮಾಡಬೇಕಾಗಿರುತ್ತದೆ. ಹಾಗೂ ಪಿಠೋಪಕರಣಗಳ ದುರಸ್ಥಿ ಮಾಡಿಸಬೇಕಿರುತ್ತದೆ.

ವಿವಿನಿಲಯದ ಆವರಣದಲ್ಲಿ ಕೆಲವು ಭಾಗದ ಸಂಪರ್ಕ ರಸ್ತೆಯು ಹದಗೆಟ್ಟಿದ್ದು ನ್ಯಾಕ್ ಕಮಿಟಿರವರು ಪರಿವೀಕ್ಷಣೆಗೆ ಬರುವ ಮೊದಲು ತುರ್ತಾಗಿ ರಸ್ತೆಯ ದುರಸ್ಥಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.

ಸದರಿ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವುದಕ್ಕೆ ತಗಲುವ ಅಂದಾಜು ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

1) ವಿಜಯನಗರ 3ನೇ ಹಂತದ ಶೈಕ್ಷಣಿಕ ಕಟ್ಟಡದ ನವೀಕರಣ ಹಾಗೂ ದುರಸ್ಥಿ ಕಾಮಗಾರಿ –ರೂ.35.00ಲಕ್ಷಗಳು
2) ದಾವಣಗೆರೆ ಮತ್ತು ಬಳ್ಳಾರಿ ಪ್ರಾದೇಶಿಕ ಕೇಂದ್ರಗಳ ಪೇಂಟಿಂಗ್ ಕಾಮಗಾರಿ – ರೂ.40.00ಲಕ್ಷಗಳು
3) ಆಡಳಿತ ಭವನ, ಘಟಿಕೋತ್ಸವ ಭವನ ಹಾಗೂ ಪರೀಕ್ಷಾ ಭವನದ ಪೇಂಟಿಂಗ್ ಕೆಲಸ – ರೂ.40.00ಲಕ್ಷಗಳು
4) ಡೇ ಕೇರ್ ಸೆಂಟರ್ ಹಾಗೂ ಲೇಡಿಸ್ ಕಾಮನ್ ರೂಂ ನವೀಕರಣ ಹಾಗೂ ಎಲ್ಲಾ ಕುಟೀರಗಳಿಗೂ ಅವಶ್ಯಕವಾದ ಬೆಡ್‌ಗಳನ್ನು ಒದಗಿಸುವ ಕಾರ್ಯ – ರೂ.30.00ಲಕ್ಷಗಳು
5) ವಿವಿನಿಲಯದ ಆವರಣದಲ್ಲಿ Intelligent Centralized Campus And Exam Surveillance System ಒದಗಿಸುವ ಕೆಲಸ – ರೂ.460.00ಲಕ್ಷಗಳು
6) ವಿವಿನಿಲಯದ ಆವರಣದಲ್ಲಿ ಎಲ್‌ಇಡಿ ಲೈಟ್ಸ್ ಅಳವಡಿಸುವ ಕೆಲಸ – ರೂ.200.00ಲಕ್ಷಗಳು
7) ಅತಿಥಿಗೃಹಕ್ಕೆ ಹಾಸಿಗೆ ಮತ್ತು ದಿಂಬುಗಳನ್ನು ಖರೀದಿಸುವ ಕೆಲಸ – ರೂ.15.00ಲಕ್ಷಗಳು
8) ವಿವಿನಿಲಯದ ಆವರಣದಲ್ಲಿ ಕೆಲವು ಭಾಗದ ಸಂಪರ್ಕ ರಸ್ತೆಯ ದುರಸ್ಥಿ ಕೆಲಸ – ರೂ.20.00ಲಕ್ಷಗಳು

ಈ ಮೇಲೆ ನಮೂದಿಸಿರುವ ಕಾಮಗಾರಿಗಳನ್ನು (4ಜಿ) ವಿನಾಯಿತಿಯ ಮಾನ್ಯತೆ ಹೊಂದಿರುವ ಯಾವುದಾದರೂ ಸರ್ಕಾರಿ ಸಂಸ್ಥೆಯ ವತಿಯಿಂದಲೂ ಅಥವಾ ವಿವಿನಿಲಯದಿಂದಲೇ ನೇರವಾಗಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ನಿರ್ವಹಿಸಬಹುದಾಗಿರುತ್ತದೆ. ಆದುದರಿಂದ ಸದರಿ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

(ಕರಡು ಪ್ರತಿಯು ಮಾನ್ಯಕುಲಪತಿರವರಿಂದ ಅನುಮೋದಿಸಲ್ಪಟ್ಟಿದೆ.)

ಕುಲಸಚಿವ

**ವಿಷಯ ಸಂಖ್ಯೆ:** 170.30

**ವಿಷಯ**: ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ 06 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ 7ನೇ ವೇತನದ ಹಿಂಬಾಕಿ ಮೊತ್ತ, ವಾರ್ಷಿಕ ವೇತನ ಬಡ್ತಿ ಹಾಗೂ ತುಟ್ಟಿಭತ್ಯೆಯನ್ನು ಮಂಜೂರು ಮಾಡಿರುವ ಬಗೆಗೆ.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಣಶಾಸ್ತ್ರ ವಿಭಾಗದ 06 ಮಂದಿ ಅತಿಥಿ ಉಪನ್ಯಾಸಕರುಗಳನ್ನು ಕರಾಮುವಿ ಪರಿನಿಯಮ "Creation of Posts & Absorption of Temporary Teachers–Statutes 2012" ರ ಮೂಲಕ ವಿಲೀನಗೊಂಡು ದಿನಾಂಕ: 10.05.2013ರಿಂದ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಅಧ್ಯಾಪಕರುಗಳಿಗೆ ವಾರ್ಷಿಕ ವೇತನ ಬಡ್ತಿ, 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು 2019ರವರೆಗೆ ಬಿಡುಗಡೆಗೊಳಿಸಲಾಗಿರುತ್ತದೆ.

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಆರು (06) ಮಂದಿ ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಾಪಕರುಗಳಿಗೆ ವಾರ್ಷಿಕ ವೇತನ ಬಡ್ತಿ, 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು ಬಿಡುಗಡೆಗೊಳಿಸಿದ್ದು, ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿ ಮೊತ್ತ, 2020ನೇ ಸಾಲಿನಿಂದ ವಾರ್ಷಿಕ ವೇತನ ಬಡ್ತಿ ಹಾಗೂ ದಿನಾಂಕ: 30.07.2021 ರಿಂದ ತುಟ್ಟಿಭತ್ಯೆಯನ್ನು ಬಿಡುಗಡೆಗೊಳಿಸಿರುವುದಿಲ್ಲ.

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸದರಿಯವರುಗಳ ನೇಮಕಾತಿಗೆ ಸಂಬಂಧಿಸಿದಂತೆ 'ಷೋಕಾಸ್ ನೋಟಿಸ್' ನೀಡುವ ಸಂಬಂಧ ಕಾನೂನು ಅಭಿಪ್ರಾಯ ನೀಡುವಂತೆ ಕೋರಿ ಶ್ರೀ ಪ್ರಸಾದ್ ಹಿರೇಮಠ್, ವಕೀಲರು, ಬೆಂಗಳೂರು, ಇವರಿಗೆ ದಿನಾಂಕ: 24.11.2020 ಮತ್ತು 22.07.2021 ರಂದು ಪತ್ರಗಳನ್ನು ರವಾನಿಸಲಾಗಿದ್ದು, ಸದರಿಯವರಿಂದ ಯಾವುದೇ ಅಭಿಪ್ರಾಯ ಸಲ್ಲಿಕೆಯಾಗಿರುವುದಿಲ್ಲ ಎಂಬುದನ್ನು ಅವಗಾಹನೆಗೆ ತರಲಾಗಿದೆ.

ಸದರಿ 06 ಮಂದಿ ಅಧ್ಯಾಪಕರುಗಳು ತುಟ್ಟಿಭತ್ಯೆ, ವಾರ್ಷಿಕ ವೇತನ ಬಡ್ತಿ ಮತ್ತು ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿಯನ್ನು ಬಿಡುಗಡೆಗೊಳಿಸುವಂತೆ ಕೋರಿ ದಿನಾಂಕ: 17.07.2020, 31.07.2020, 08.10.2020 ಮತ್ತು 05.08.2021 ರಂದು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಐದು ಮಂದಿ (05) ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಆರ್. ಶರಣಮ್ಮ, ಡಾ. ಆರ್. ನಾಗೇಂದ್ರಕುಮಾರ್, ಡಾ. ಎನ್. ಕೃಷ್ಣಪ್ಪ, ಡಾ. ಎಂ. ಜಾನಕಿ ಮತ್ತು ಡಾ. ಶೈಲಜಾ ಪಿ. ಶಾನಭಾಗ್ ಇವರುಗಳು ಕರ್ನಾಟಕ ರಾಜ್ಯ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ (W.P.No.16269/2022(S-RES) ಹೂಡಿದ್ದು, ಸದರಿ ನ್ಯಾಯಾಲಯವು ದಿನಾಂಕ: 18.10.2022 ರ ಆದೇಶದಲ್ಲಿ ಸದರಿಯವರ ಮನವಿಯನ್ನು ಪರಿಗಣಿಸಿ ಸರ್ಕಾರದ ಆದೇಶದನ್ವಯ ಹಾಗೂ ನಿಯಮಾನುಸಾರ ಆದೇಶ ಹೊರಡಿಸುವಂತೆ ತೀರ್ಪು ನೀಡಿರುತ್ತದೆ.

ಶಿಕ್ಷಣಶಾಸ್ತ್ರ ವಿಭಾಗದ 05 ಮಂದಿ ಸಹಾಯಕ ಪ್ರಾಧ್ಯಾಪಕರುಗಳು ಉಲ್ಲೇಖಿತ ಮನವಿ ಪತ್ರದೊಂದಿಗೆ ಕರ್ನಾಟಕ ರಾಜ್ಯ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:18.10.2022ರ ಆದೇಶದ ಪ್ರತಿಯನ್ನು ಸಲ್ಲಿಸಿ, ಮುಂದಿನ ಕ್ರಮ ವಹಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಕರ್ನಾಟಕ ರಾಜ್ಯ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:18.10.2022 ರ ಆದೇಶವನ್ನು ಪರಿಗಣಿಸಿ, ಮಾನ್ಯ ಕುಲಪತಿಗಳು (ಪ್ರಭಾರ)ರವರ ಅನುಮೋದನೆ ಮೇರೆಗೆ, ವ್ಯವಸ್ಥಾಪನಾ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಐದು ಮಂದಿ (05) ಸಹಾಯಕ

ಪ್ರಾಧ್ಯಾಪಕರುಗಳಾದ ಡಾ. ಆರ್. ಶರಣಮ್ಮ, ಡಾ. ಆರ್. ನಾಗೇಂದ್ರ ಕುಮಾರ್, ಡಾ. ಎನ್. ಕೃಷ್ಣಪ್ಪ, ಡಾ. ಎಂ. ಜಾನಕಿ ಮತ್ತು ಡಾ. ಶೈಲಜಾ ಪಿ. ಶಾನಭಾಗ್ ಇವರುಗಳಿಗೆ ವಿ.ವಿ. ಆದೇಶ ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-1/609/2022-23/ ದಿನಾಂಕ: 10.11.2022 ರ ಆದೇಶದನ್ವಯ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸದರಿಯವರುಗಳಿಂದ 'ಮುಚ್ಚಳಿಕೆ'ಯನ್ನು ಬರೆಸಿಕೊಂಡು ತಡೆಹಿಡಿಯಲಾಗಿರುವ ತುಟ್ಟಿಭತ್ಯೆ, ವಾರ್ಷಿಕ ವೇತನ ಬಡ್ತಿ ಹಾಗೂ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಡಾ. ಷಣ್ಮುಖ, ಸಹಾಯಕ ಪ್ರಾಧ್ಯಾಪಕರು (ನಿವೃತ್ತಿ), ಶಿಕ್ಷಣಾಶಾಸ್ತ್ರ ಅಧ್ಯಯನ ವಿಭಾಗ, ಇವರಿಗೂ ಸಹ ಮೇಲ್ಕಂಡ ಅಧ್ಯಾಪಕರುಗಳಿಗೆ ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ, ಯುಜಿಸಿ 7ನೇ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿ ಮೊತ್ತ ಹಾಗೂ ದಿನಾಂಕ: 30.07.2021ನೇ ಸಾಲಿನಿಂದ ತುಟ್ಟಿಭತ್ಯೆಯನ್ನು ಬಿಡುಗಡೆಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ವಿ.ವಿ. ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/609/2022-23/ ದಿನಾಂಕ: 13.01.2023 ರ ಆದೇಶದನ್ವಯ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸದರಿಯವರಿಂದ 'ಮುಚ್ಚಳಿಕೆ'ಯನ್ನು ಬರೆಯಿಸಿಕೊಂಡು ಬಿಡುಗಡೆಗೊಳಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಕೈಗೊಂಡಿರುವ ಎರಡೂ ಕ್ರಮಗಳ ವರದಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ.

19/04/2023

ಕುಲಸಚಿವ

(ಕರಡು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ವಿಷಯ ಸಂಖ್ಯೆ: 170・31

**ವಿಷಯ:** ಬಿ.ಎಸ್.ಎನ್.ಎಲ್. ಮೈಸೂರು, ರವರಿಗೆ ಇಂಟರ್‌ನೆಟ್ ಸೇವೆಯ ಸಂಬಂಧ ಮುಂಗಡವಾಗಿ ರೂ.24,49,680/–(ಜಿ.ಎಸ್.ಟಿ ಒಳಗೊಂಡು) ಪಾವತಿಸಿ 1 GBPS Internet line ಅನ್ನು ಪ್ರತಿ ವರ್ಷ ನವೀಕರಿಸುವ ಬಗ್ಗೆ.

*******

ವಿವಿ ನಿಲಯದ Data centre ಹಾಗೂ Digital evaluation ಕಾರ್ಯಕ್ಕೆ ಪ್ರತ್ಯೇಕವಾಗಿ ಬಿ.ಎಸ್.ಎನ್.ಎಲ್. ಮೈಸೂರು, ರವರಿಂದ 1 GBPS 1:1 Internet line ಅನ್ನು ವಾರ್ಷಿಕ 24,49,680/–(ಜಿ.ಎಸ್.ಟಿ ಒಳಗೊಂಡು) ಗೆ ಮುಂಗಡವಾಗಿ ಪಾವತಿಸಿ ದಿನಾಂಕ 11.11.2021 ರಿಂದ ಸೇವೆಯನ್ನು ಪಡೆಯಲಾಗಿದ್ದು. ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 166ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿ ಘಟನ್ನೋತ್ತರ ಅನುಮತಿಯನ್ನು ಪಡೆಯಲಾಗಿತ್ತು. ಈ ಸಂಬಂಧ ಪ್ರತಿ ವರ್ಷ 1 GBPS 1:1 Internet line ಸೇವೆಯನ್ನು ನವೀಕರಿಸಿ ವಾರ್ಷಿಕವಾಗಿ ಮುಂಗಡ ರೂ.24,49,680/–(ಇಪ್ಪತ್ತನಾಲ್ಕು ಲಕ್ಷದ ನಲವತ್ತೊಂಬತ್ತು ಸಾವಿರದ ಆರುನೂರ ಎಂಭತ್ತು ರೂಗಳು ಮಾತ್ರ) ಗಳನ್ನು ಬಿ.ಎಸ್.ಎನ್.ಎಲ್. ರವರಿಗೆ ಪಾವತಿಸುವ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

(ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ಕುಲಸಚಿವರು

**ವಿಷಯ ಸಂಖ್ಯೆ :** 170.32

**ವಿಷಯ: ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

*****

ದಿನಾಂಕ: 19–01–2023 ರಂದು ನಡೆದ 24ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ದಿನಾಂಕ: 21–01–2023 ರಂದು ನಡೆಯಲಿರುವ 170ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಕುಲಸಚಿವ**

**(ವಿಷಯ ಮಂಡನೆಗೆ ಕುಲಪತಿಗಳ ಅನುಮೋದನೆ ಪಡೆಯಲಾಗಿದೆ)**

ವಿಷಯ ಸಂಖ್ಯೆ: 170.33

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹಾಯಕ ನಿರ್ದೇಶಕರ ಹುದ್ದೆಗೆ (Re-deploy) ಮೂಲಕ ನೇಮಕ ಮಾಡುವ ಬಗೆಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹಾಯಕ ನಿರ್ದೇಶಕರ ಹುದ್ದೆಗೆ ಆಯ್ಕೆ ಮಾಡಲು ದಿನಾಂಕ: 26.012.2022 ರಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ:11.01.2023 ರಂದು ಸಭೆ ಸೇರಿ ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ಸಭೆಯ ತೀರ್ಮಾನದನ್ವಯ ಸಹಾಯಕ ನಿರ್ದೇಶಕರ ಹುದ್ದೆಗೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಲು ದಿನಾಂಕ:12.01.2023ರಂದು ಆಂತರಿಕ ಅಧಿಸೂಚನೆ ಹೊರಡಿಸಿ ಕರಾಮುವಿ ನಿಲಯದ ಖಾಯಂ ನೌಕರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಈ ಸಂಬಂಧ ಸಹಾಯಕ ನಿರ್ದೇಶಕರ ಹುದ್ದೆಗೆ ಒಟ್ಟಾರೆ 11 (ಹನ್ನೊಂದು) ಅರ್ಜಿಗಳು ಸ್ವೀಕೃತಗೊಂಡಿರುತ್ತವೆ.

ಸದರಿ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಂಬಂಧ ಸಮಿತಿಯ ಸದಸ್ಯರನ್ನು ಒಳಗೊಂಡಂತೆ ದಿನಾಂಕ:20.01.2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಭೆಯನ್ನು ನಡೆಸಲಾಗಿದ್ದು, ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿದ್ದು, ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಿದೆ.

ಕುಲಸಚಿವ

(ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ).

170.
ವಿಷಯ ಸಂಖ್ಯೆ: 34

ವಿಷಯ: Digital Academic Platform ಸೇವೆಯನ್ನು ಕರಾಮುವಿಯಲ್ಲಿ ಪಡೆಯುವ ಬಗ್ಗೆ.

* * * * *

ಕರಾಮುವಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಸಂಪೂರ್ಣ Paperless ಮಾಡಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳು ನಿರಂತರವಾಗಿ ಸಂಪರ್ಕದಲ್ಲಿದ್ದು ಸಮಾಲೋಚನೆ ನಡೆಸಲು ಅನುಕೂಲವಾಗುವ ಉದ್ದೇಶದಿಂದ ಈ ಕೆಳಕಂಡ features ಗಳನ್ನೊಳಗೊಂಡ Digital Academic Platform ನ ಅವಶ್ಯವಿದ್ದು, ಈ ಸಂಬಂಧ, M/s. MySmartShala ರವರು Rs 250 + GST per student per academic year ಎಂಬ ದರದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, Digital Academic Platform ಸೇವೆಯನ್ನು ಪಡೆಯುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**Features:**

1. Paperless Assignments, Reports, Documents & Notes Submission Platform with Digital Signature facility.
2. Digital Notes Library – A dedicated repository system to store all kind of notes in the cloud, which will be accessible to all students and teachers at a fingertip
3. Digital Circular & Communication Platform – A dedicated messaging platform, it is a mixture of email and WhatsApp. At a fingertip VC/Registrar/Chairpersons can send messages to all students
4. M-Community & Quiz – Customized quiz's and other MCQ questionaries' based on requirements

ಕುಲಸಚಿವ